# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES


ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 • ಸಂಚಿಕೆ:201 • ನೋಂದಣಿ ನಂ.:KARKAN27911 • ವಿಜಯನಗರ • 04.01.2024 • ಗುರುವಾರ • ಪುಟ:04 • ಬೆಲೆ:2

Volume:01 • Issue:201 • Reg.No:KARKAN27911 • VIJAYANAGARA • 04.01.2024 • Thursday • Page:04 • Rs:2


# ಕೃಷಿ ಭೂಮಿ ಖರೀದಿ ಕೈಬಿಡಿ

## ಸರ್ಕಾರ ಸ್ವಾಧೀನಕ್ಕೆ ಪಡೆದ ಭೂಮಿ ಮರಳಿಸಿ, ಕೃಷಿ ಮಾಡುವವರಿಗೆ ಪಟ್ಟಾ ಕೊಡಿ

### ಹೊಸಪೇಟೆ ತಾಲೂಕು ಕಚೇರಿ ಎದುರು ಕರ್ನಾಟಕ ಪ್ರಾಂತ ರೈತ ಸಂಘದಿಂದ ರೈತರು ಪ್ರತಿಭಟನೆ

■ **ಹಂಪಿ ಟೈಮ್ಸ್ ಹೊಸಪೇಟೆ:**
ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗಗಳ ರೈತರು ಭೂಮಿಯೇ ಅನ್ನಕೊಡುವ ದೈವವೆಂದು ನಂಬಿ ದುಡಿಯುತ್ತಿದ್ದಾರೆ. ಕೆರೆ ಯೋಜನೆ ಹೆಸರಿನಲ್ಲಿ ಆರ್.ಐ ಮತ್ತು ವಿಎ ವರದಿ ಇಲ್ಲದೇ ಭೂಸ್ವಾಧೀನ ನಿಯಮ ಉಲ್ಲಂಘಿಸಿ ಈ ಜಮೀನುಗಳನ್ನು ಅಧಿಕಾರಿಗಳು ಮಧ್ಯವರ್ತಿಗಳ ಮೂಲಕ ಸ್ವಾಧೀನಕ್ಕೆ ತೆಗೆದುಕೊಂಡಿರುವುದು ಖಂಡನೀಯ ಎಂದು ಕೆಪಿಆರ್‌ಎಸ್ ಜಿಲ್ಲಾ ಮುಖಂಡ ಎನ್.ಯಲ್ಲಾಲಿಂಗ ಆಕ್ರೋಶ ವ್ಯಕ್ತಪಡಿಸಿದರು.

ನಗರದ ತಾಲೂಕು ಕಚೇರಿ ಎದುರು ಎಐಕೆಎಸ್ ಸಂಯೋಜಿತ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು, ಬುಧವಾರ ರೈತರು ಜಮೀನು ಉಳಿಸಿ, ಭೂಸುಧಾರಣೆ ನಿಯಮಗಳಡಿ ಪುನರ್ವಸತಿ ಕಲ್ಪಿಸಲು ಒತ್ತಾಯಿಸಿ ಪ್ರತಿಭಟನೆ ನಡೆಸಿ ಮಾತನಾಡಿದರು. ಪಿಕೆ ಹಳ್ಳಿ ಏತನೀರಾವರಿ ಯೋಜನೆಗೆ ಸಂಬಂಧಿಸಿದ ಗಣಿಭಾಧಿತ ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಹಾಗೂ ಕೆರೆ ತುಂಬಿಸುವ ಯೋಜನೆಗಾಗಿ ಪರಿಶಿಷ್ಟ ಜಾತಿ ರೈತರ ಜಮೀನುಗಳನ್ನು 1894 ಕಲಂ 28ಎ ಭೂಸ್ವಾಧೀನ ಆಕ್ಟ್ ಉಲ್ಲಂಘನೆ ಮಾಡಿ ನೇರ ಖರೀದಿಗೆ ಮುಂದಾಗಿರುವುದನ್ನು ಕೈಬಿಡಬೇಕು. ಪಕ್ಕದ ಸರ್ಕಾರಿ ಜಮೀನಿನಲ್ಲಿ ಈ ಯೋಜನೆ ಕಾರ್ಯಗತಗೊಳಿಸಬೇಕು. ಪಿಕೆ ಹಳ್ಳಿ ಏತನೀರಾವರಿ ಹಾಗೂ ಕುಡಿಯುವ ನೀರಿನ ಯೋಜನೆಯು ಸ್ವಾಗತಾರ್ಹ. ಆದರೆ ಕೃಷಿಯನ್ನೆ




ನಂಬಿ ಬದುಕುತ್ತಿರುವ ಕುಟುಂಬಗಳಿಂದ ಭೂಮಿಯನ್ನು ಕಿತ್ತುಕೊಳ್ಳಬಾರದು. 1894 ಕಲಂ 28ಎ ಭೂಸ್ವಾಧೀನ ಐತೀರ್ಪಿನ ಪ್ರಕಾರ ಭೂ ವಂಚಿತರಿಗೆ 3 ಪಟ್ಟು ಪರಿಹಾರ ಮೊತ್ತ ಮತ್ತು ಪರಿಣಾಮಕಾರಿ ಪುನರ್ವಸತಿ ಅಂಶಗಳನ್ನು ಪರಿಗಣಿಸಿ ಭೂಸ್ವಾಧೀನಕ್ಕೆ ಮುಂದಾಗಬೇಕಾಗುತ್ತದೆ ಆದರೆ ಇಲ್ಲಿ ಕಾನೂನು ಉಲ್ಲಂಘನೆ ಮಾಡಿ ನೇರ ಖರೀದಿಗೆ ಮುಂದಾಗಿರುವ ನೀತಿಯನ್ನು ಸಂಘಟನೆ ವಿರೋಧಿಸುತ್ತದೆ ಎಂದರು.

ಅಧಿಕಾರಿಗಳು ಸರಿಯಾದ ಮಾಹಿತಿಯು ಕೊಡದೇ ಕಂಟ್ರಾಕ್ಟರ್ ಹೆಸರಿನಲ್ಲಿ ಒತ್ತಾಯದ ಮೂಲಕ 3 ಲಕ್ಷ 5 ಲಕ್ಷದಂತೆ ತಲಾ ಒಬ್ಬರಿಗೆ ಅಡ್ವಾನ್ಸ್ ಕೊಟ್ಟು ಅಗ್ರಿಮೆಂಟ್ ಬಾಂಡ್ ಮಾಡಿಸಲಾಗುತ್ತಿರುವುದು ಸರಿಯಲ್ಲ. ನಮ್ಮ ಜಮೀನುಗಳು ಕೊಡುವುದಿಲ್ಲ ತಾವು ಕೊಟ್ಟ ಹಣ ವಾಪಸ್ ಪಡೆದು ಕಾಮಗಾರಿ ಸ್ಥಗಿತಗೊಳಿಸಿ ಪಕ್ಕದಲ್ಲಿ ಬರುವ ಸರ್ಕಾರಿ ಭೂಮಿಯಲ್ಲಿ ಈ ಯೋಜನೆ ಕಾರ್ಯರೂಪಕ್ಕೆ ತರಲು ಮುಂದಾಗಬೇಕು. ಇಲ್ಲವಾದಲ್ಲಿ ಕುಟುಂಬ ಸಮೇತ ಅನಿರ್ಧಿಷ್ಟಾವಧಿ ಧರಣಿ ಮುಂದಿನ ದಿನಗಳಲ್ಲಿ ಹಮ್ಮಿಕೊಳ್ಳಲಾಗುವುದು ಎಂದು ಆಗ್ರಹಿಸಿದರು. ಹಿರಿಯ ಮುಖಂಡ ಭಾಸ್ಕರ ರೆಡ್ಡಿ ಮಾತನಾಡಿದರು. ಮುಖಂಡರಾದ ಜಿ.ಕರೆಹನುಮಂತ, ನಿಜಲಿಂಗಪ್ಪ, ಪಕೀರಪ್ಪ, ದಾಸರ ಅಂಜಿನಿ, ಕಾಗೆ ಮಂಜುನಾಥ ಇತರರು ಇದ್ದರು. ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ತಹಶೀಲ್ದಾರ್ ಮೂಲಕ ಎಸಿಗೆ ಮನವಿ ಸಲ್ಲಿಸಿದರು.

**ಮೈಕ್ರೋ ನ್ಯೂಸ್**

## ರಾಷ್ಟ್ರೀಯ ಆರೋಗ್ಯ ಅಭಿಯಾನ: ಜನ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ

**ಹಂಪಿ ಟೈಮ್ಸ್ ಹೊಸಪೇಟೆ**
ಆರೋಗ್ಯ ಇಲಾಖೆಯಿಂದ ಅನುಷ್ಠಾನಗೋಳ್ಳುವ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮಗಳ ಬಗ್ಗೆ ಜನ ಸಮುದಾಯಕ್ಕೆ ಜಾನಪದ ಕಲೆ, ಬೀದಿನಾಟಕದ ಮುಖಾಂತರ ಅರಿವು ಮೂಡಿಸುವ ಜನ ಜಾಗೃತಿ ಕಾರ್ಯಕ್ರಮಕ್ಕೆ ಬುಧವಾರ ನಗರದ 60ಹಾಸಿಗೆಗಳ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಮುಂಭಾಗದಲ್ಲಿ ಹೊಸಪೇಟೆ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಭಾಸ್ಕರ್ ಚಾಲನೆ ನೀಡಿದರು.
ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ಶಸ್ತ್ರ ಚಿಕಿತ್ಸಕರಾದ ಡಾ. ಸಲೀಂ, ಅರವಳಿಕೆ ತಜ್ಞರಾದ ಡಾ. ನೂರಬಾಷಾ ಸೇರಿದಂತೆ ಮಸಾರಿ ನೆಲ್ಲುಕುದುರೆ-2 ಗ್ರಾಮದ ಜಾನಪದಾ ಕಲಾ ತಂಡ ರಂಗಲೋಕ ಗ್ರಾಮೀಣಾಬಿವೃದ್ಧಿ ಸಂಸ್ಥೆಯ ಕಲಾವಿದರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ಉಪಸ್ಥಿತರಿದ್ದರು.






# ದಿನಪತ್ರಿಕೆ ವಿತರಕರು ಸೌಲಭ್ಯಕ್ಕಾಗಿ ನೋಂದಾಯಿಸಿ



■ **ಹಂಪಿ ಟೈಮ್ಸ್ ಹೊಸಪೇಟೆ**
ಅಪಘಾತ ಪರಿಹಾರ, ವೈದ್ಯಕೀಯ ಸೌಲಭ್ಯಕ್ಕೆ ದಿನಪತ್ರಿಕೆ ವಿತರಕರು ನೋಂದಾಯಿಸಿಕೊಳ್ಳುವಂತೆ ಜಿಲ್ಲಾ ಕಾರ್ಮಿಕ ಅಧಿಕಾರಿ ಸೂರಪ್ಪ ಡಂಬಾಳ್ ತಿಳಿಸಿದ್ದಾರೆ. ಅಸಂಘಟಿತ ವಲಯದ ವ್ಯಾಪ್ತಿಯಲ್ಲಿ ಬರುವ ದಿನ ಪತ್ರಿಕೆ ವಿತರಿಸುವ ಕಾರ್ಮಿಕರು ಅಪಘಾತಗೊಂಡಲ್ಲಿ ಪರಿಹಾರ ಹಾಗೂ ವೈದ್ಯಕೀಯ ಸೌಲಭ್ಯ ಒದಗಿಸುವ ಸಂಬಂಧ "ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ"ಯನ್ನು ಜಾರಿಗೆ ತಂದಿದ್ದು, ಎಲ್ಲಾ ಅರ್ಹ ದಿನಪತ್ರಿಕೆ ವಿತರಿಸುವ ಕಾರ್ಮಿಕರು ಕೇಂದ್ರ ಸರ್ಕಾರದ ಇ-ಶ್ರಮ್ ಪೋರ್ಟಲ್ಝಣಣಠಿ://ಜುಡಿಚಿಟ.ರಡಿತ.ಏಟಿನಲ್ಲಿ 'ನ್ಯೂಸ್ ಪೇಪರ್ ಬಾಯ್' ಎಂಬ ವರ್ಗದಡಿ ನೋಂದಾಯಿಸಿಕೊಳ್ಳಬೇಕು.

ಯೋಜನೆಸೌಲಭ್ಯಗಳು: ದಿನಪತ್ರಿಕೆ ವಿತರಕರು ಅಪಘಾತದಿಂದ ಮರಣ ಹೊಂದಿದಲ್ಲಿ ರೂ.2 ಲಕ್ಷ, ಅಪಘಾದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2ಲಕ್ಷಗಳವರೆಗೆ (ಶೇಕಡಾವಾರು ದುರ್ಬಲತೆ ಆಧಾರದ ಮೇಲೆ), ಅಪಘಾತ ಅಥವಾ ಮಾರಣಾಂತಿಕ ಕಾಯಿಲೆ ಅಥವಾ ಗಂಭೀರ ಅನಾರೋಗ್ಯಕ್ಕೆ ತುತ್ತಾದಲ್ಲಿ ಆಸ್ಪತ್ರೆ ವೆಚ್ಚ ಮರುಪಾವತಿ ರೂ.1 ಲಕ್ಷಗಳವರೆಗೆ ಸೌಲಭ್ಯ ದೊರೆಯಲಿದೆ.

ಈ ಸೌಲಭ್ಯಕ್ಕಾಗಿ ಕೇಂದ್ರ ಸರ್ಕಾರದ ಇ-ಶ್ರಮ್ ಪೋರ್ಟಲ್‌ನಲ್ಲಿ 'ನ್ಯೂಸ್ ಪೇಪರ್ ಬಾಯ್'ಎಂಬ ವರ್ಗದಡಿ ನೋಂದಣಿಯಾಗಿರಬೇಕು. 16 ರಿಂದ 59 ವರ್ಷದೊಳಗಿರಬೇಕು. ರಾಜ್ಯದ ನಿವಾಸಿಯಾಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇ.ಪಿ.ಎಫ್ ಹಾಗೂ ಇ.ಎಸ್.ಐ ಫಲಾನುಭವಿಯಾಗಿರಬಾರದು.

ಆಧಾರ್ ಕಾರ್ಡ್(ಆಧಾರ್ ಕಾರ್ಡ್ ಇ ಕೆವೈಸಿ ಕಡ್ಡಾಯ), ಸಕ್ರಿಯ ಬ್ಯಾಂಕ್ ಖಾತೆಯ ಪಾಸ್ ಬುಕ್, ಸಕ್ರಿಯ ಮೊಬೈಲ್ ಸಂಖ್ಯೆ, ಖಾತೆ ಹೊಂದಿರುವ ಬ್ಯಾಂಕಿನ ಐ.ಎಫ್.ಎಸ್.ಸಿ ಕೋಡ್ ವಿವರದೊಂದಿಗೆ ನೋಂದಾಯಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕಾರ್ಮಿಕ ಅಧಿಕಾರಿಗಳ ಕಚೇರಿ, ವಿಜಯನಗರ ಉಪ ವಿಭಾಗ, ಹೊಸಪೇಟೆ ಗವಿಸಿದ್ದೇಶ್ವರ ನಗರ, ಅಬುಬಕರ್ ಮಸೀದಿ ಹತ್ತಿರ, ರಿಲಯನ್ಸ್ ಟವರ್ ಎದುರು, ವಿಜಯನಗರ ಜಲ್ಲೆ, ಹೊಸಪೇಟೆ ಹಾಗೂ ಆಯಾ ತಾಲ್ಲೂಕಿನ ಕಾರ್ಮಿಕ ನಿರೀಕ್ಷಕರನ್ನು ಸಂಪರ್ಕಿಸಬಹುದು.

# ಜಾತ್ರೆಯಲ್ಲಿ ಪ್ರಾಣಿ ಬಲಿ ನಿಷೇಧ




■ **ಹಂಪಿ ಟೈಮ್ಸ್ ಹರಪನಹಳ್ಳಿ**
ತಾಲ್ಲೂಕಿನ ಅರಸೀಕೆರೆ ಗ್ರಾಮದ ಗ್ರಾಮ ಪಂಚಾಯಿತಿ ಹಾಗೂ ಪೊಲೀಸ್ ಇಲಾಖೆಯ ವತಿಯಿಂದ ದಂಡಿ ದುರುಗಮ್ಮ ಜಾತ್ರೆ ಪ್ರಯುಕ್ತ ಶಾಂತಿ ಸಭೆ ನಡೆಸಲಾಯಿತು.
ವೃತ್ತ ನಿರೀಕ್ಷಕ ನಾಗರಾಜ್ ಕಮ್ಮಾರ್ ಮಾತನಾಡಿ:- ದಿನಾಂಕ:-ಜನವರಿ 05.06.07 ರಂದು ನಡೆಯುವ ದಂಡಿ ದುರುಗಮ್ಮ ಜಾತ್ರೆಯಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಮಾಡಲಾಗುವುದು.
ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ, ಪಂಚಾಯಿತಿ ಹಾಗೂ ಕಮಿಟಿ ವತಿಯಿಂದ ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಬೇಕು, ಜನ ದಟ್ಟಣೆಯಾಗುವುದರಿಂದ ಬಸ್ ನಿಲ್ದಾಣ ಪಕ್ಕದಲ್ಲಿರುವ ಶೆಡ್ ಗಳನ್ನು ತೆರವುಗೊಳಿಸಿ ವಾಹನಗಳು ಸುಗಮವಾಗಿ ಸಂಚರಿಸಲು ವ್ಯವಸ್ಥೆ ಮಾಡಿಕೊಡಬೇಕು, ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗುವುದು, ತುರ್ತು ಸೇವೆಗೆ 112 ವಾಹನಕ್ಕೆ ಕರೆ ಮಾಡಿರಿ, ದಂಡಿ ದುರುಗಮ್ಮ ಜಾತ್ರೆಯಲ್ಲಿ ಪ್ರಾಣಿ ಬಲಿಯನ್ನು ಸಂಪೂರ್ಣ ನಿಷೇಧಿಸಲಾಗಿದೆ.
ತಪ್ಪಿದ್ದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು,ಶಾಸಕರು ಹೇಳಿದಂತೆ ಈ ವರ್ಷ ಬರಗಾಲ ಹಾಗೂ ಕೋವಿಡ್ ಇರುವುದರಿಂದ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳು ಇರುವುದಿಲ್ಲ ಎಂದು ಹೇಳಿದರು.
ಅಭಿವೃದ್ಧಿ ಅಧಿಕಾರಿ ಅಂಜಿನಪ್ಪ ಮಾತನಾಡಿ:-ಜಾತ್ರೆಗೆ ಬರುವ ಭಕ್ತಾಧಿಗಳಿಗೆ ಗ್ರಾಮ ಪಂಚಾಯಿತಿ ವತಿಯಿಂದ ಚರಂಡಿ ಸ್ವಚ್ಛತೆ, ನೀರಿನ ವ್ಯವಸ್ಥೆ, ವಿದ್ಯುತ್,ಆರೋಗ್ಯ ಇಲಾಖೆಯಿಂದ ರಕ್ತದಾನ ಶಿಬಿರ, ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುವುದು ಎಂದು ಹೇಳಿದರು.
ಡಾ.ಎಂ.ಸುರೇಶ್ ವಕೀಲರು ಮಾತನಾಡಿ:-ಜಾತ್ರೆಗೆ ಬರುವ ಭಕ್ತಾಧಿಗಳಿಗೆ ಶೌಚಾಲಯ ವ್ಯವಸ್ಥೆಯಿರುವುದಿಲ್ಲ, ಬಸ್ ನಿಲ್ದಾಣದಲ್ಲಿ ತಾತ್ಕಾಲಿಕವಾಗಿ ಶೌಚಾಲಯ ವ್ಯವಸ್ಥೆ ಮಾಡಿಸಿ, ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಹೇಳಿದರು.
ಕಮಿಟಿ ಸದಸ್ಯರಾದ ಪೂಜಾರ್ ಮರಿಯಪ್ಪ ಮಾತನಾಡಿ:- ಪ್ರತಿವರ್ಷ ಸಂಪ್ರದಾಯದಂತೆ 3 ದಿವಸಗಳ ಕಾಲ ಶಾಂತಿಯುತವಾಗಿ ಜಾತ್ರೆ ನಡೆಸಲಾಗುವುದು ಎಂದು ಹೇಳಿದರು.
ಪಿಎಸ್ಐ. ರಂಗಯ್ಯ ಮಾತನಾಡಿ:-ಈ ಜಾತ್ರೆ ಶಾಂತಿಯುತವಾಗಿ ನಡೆಯಲು ಸಂಪೂರ್ಣ ಸಹಕಾರ ನೀಡಬೇಕು, ಸಾರ್ವಜನಿಕರಿಗೆ ತೊಂದರೆಯಾಗದಂತೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುವುದು, ದೇವಸ್ಥಾನದ ಸುತ್ತ ಜನ ದಟ್ಟಣೆಯಾಗುವುದರಿಂದ ಸಿಸಿ ಕ್ಯಾಮರಾ ಅಳವಡಿಸುವುದು ಅತ್ಯವಶ್ಯಕ ಎಂದು ಹೇಳಿದರು.
ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಎ. ಇನಾಯತ್ ಉಲ್ಲಾ, ಪಿಎಸ್ಐ. ರಂಗಯ್ಯ, ಜಾತಪ್ಪ,ಸಿಬ್ಬಂದಿಗಳಾದ ಕೂಲಹಳ್ಳಿ ಕೊಟ್ರೇಶ್, ಮಂಜುನಾಥ್,ಗ್ರಾಮ ಪಂಚಾಯಿತಿ ಸದಸ್ಯರಾದ ಅಡ್ಡಿ ಚನ್ನವೀರಪ್ಪ, ಅದಾಮ್ ಸಾಹೇಬ್, ಮುತ್ತಿಗಿ ಹನುಮಂತಪ್ಪ,ಕೆ. ಮಹಾಂತೇಶ್, ಎಂ.ಚಂದ್ರಪ್ಪ, ಮುಖಂಡರಾದ ಐ. ಸಲಾಂ ಸಾಹೇಬ್, ಹಾಲೇಶ್, ವೆಂಕಟೇಶ್, ಕೆ. ಡಿ. ಅಂಜಿನಪ್ಪ, ಲಕ್ಷ್ಮಣ್, ಷಣ್ಮುಖಪ್ಪ,ನವೀನ್, ಅಭಿವೃದ್ಧಿ ಅಧಿಕಾರಿ ಅಂಜಿನಪ್ಪ, ಕಾರ್ಯದರ್ಶಿ ನಾಗರಾಜ್ ಹಾಗೂ ಊರಿನ ಗ್ರಾಮಸ್ಥರು ಹಾಜರಿದ್ದರು.






# ಸಿರಿಧಾನ್ಯ ರೋಡ್ ಶೋ




■ **ಹಂಪಿ ಟೈಮ್ಸ್ ಹೊಸಪೇಟೆ**
ಜಿಲ್ಲಾ ಮಟ್ಟದ ಸಿರಿಧಾನ್ಯ ಮೇಳದ ಪ್ರಯುಕ್ತಹಾಗೂ ಸಿರಿಧಾನ್ಯಗಳ ಕುರಿತು ಜಾಗೃತಿ ಮೂಡಿಸಲುಕೃಷಿ ಇಲಾಖೆಯಿಂದ ಬುಧವಾರ ನಗರದಲ್ಲಿ ಹಮ್ಮಿಕೊಂಡಿದ್ದ 'ಸಿರಿಧಾನ್ಯ ರೋಡ್ ಶೋ' (ಸಿರಿಧಾನ್ಯ ನಡಿಗೆ) ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಹಸಿರು ನಿಶಾನೆ ತೋರಿಸುವುದರ ಮೂಲಕ ಚಾಲನೆ ನೀಡಿದರು.
ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸದಾಶಿವ ಪ್ರಭು ಬಿ., ಜಂಟಿ ಕೃಷಿ ನಿರ್ದೇಶಕ ಶರಣಪ್ಪಮುದಗಲ್ ಸೇರಿದಂತೆ ಕೃಷಿ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.
ಸಿರಿಧಾನ್ಯ ನಡಿಗೆಮೂಲಕ ವಿಶೇಷ ಜಾಗೃತಿ:ನಗರದ ಎ.ಪಿ.ಎಂ.ಸಿ ವೃತ್ತದಿಂದ ವಿಜಯನಗರ ಕಾಲೇಜು ಮೈದಾನದವರೆಗೆ ನಡೆದಸಿರಿಧಾನ್ಯ ನಡಿಗೆಯಲ್ಲಿ'ನಮ್ಮ ನಡಿಗೆ ಸಿರಿಧಾನ್ಯಗಳ ಕಡೆಗೆ, ಸಿರಿಧಾನ್ಯ ಸಿಂಗಾರ ಆರೋಗ್ಯ ಬಂಗಾರ, ಸಿರಿಧಾನ್ಯಗಳ ತಾಕತ್ತು ಸಕಲ ಪೌಷ್ಟಿಕಾಂಶಗಳ ಸಂಪತ್ತು, ಸಿರಿಧಾನ್ಯ ಬೆಳೆ ಇರಲಿ ಪ್ರೋತ್ಸಾಹ ಧನ ತರಲಿ, ಬರಗಾರದಲ್ಲೂ ಬಂಗಾರ ಸಿರಿಧಾನ್ಯ, ಸಿರಿಧಾನ್ಯ ಬಳಸಿರಿ ಆರೋಗ್ಯದಲ್ಲಿ ಸಿರಿವಂತರಾಗಿ, ಸಜ್ಜೆ ತಿಂದವರು ಉತ್ಸಾಹದ ಕಹಳೆ ಊದುವರು, ರಾಗಿ ತಿಂದವರು ರೋಗದಿಂದ ಮುಕ್ತರಾಗುವರು' ಎಂಬ ಸಂದೇಶ ಫಲಕಗಳನ್ನು ಹಿಡಿದು ವಿಶೇಷ ಜಾಗೃತಿ ಮೂಡಿಸಲಾಯಿತು.

**ಒಳ ಪುಟಗಳಲ್ಲಿ**


**ಪಂಪನಿಲ್ಲಿ ಮುಖ್ಯಮಂತ್ರಿ**
– ರಹಮತ್ ತರೀಕೆರೆ
ಪುಟ 2 ರಲ್ಲಿ ಓದಿ

**ಗರಡಿ ಕುಸ್ತಿ ಮಾಸ್ಟರ್ ಶಿವಾನಂದ್**
– ಡಾ.ಸುಧಾಕರ.ಜಿ.ಲಕ್ಕವಳ್ಳಿ.
ಪುಟ 3 ರಲ್ಲಿ ಓದಿ

**ಮಧ್ಯವರ್ತಿಗಳನ್ನು ದೂರವಿರಿಸಿ ಜನಸೇವೆ ಮಾಡಿ: ಸಿಎಂ ಸಿದ್ದರಾಮಯ್ಯ**
ಪುಟ 2 ರಲ್ಲಿ ಓದಿ

## ವಚನ ಅರಿವು

### ಮನದೊಡೆಯ

**ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ!**
**ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,**
**ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ!**
**ತನುವಿನಲ್ಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ**
**ಮನದೊಳಗೆ ಮನದೊಡೆಯಯನಿದ್ದಾನೊ, ಇಲ್ಲವೊ!**
**ಇಲ್ಲ, ಕೂಡಲಸಂಗಮದೇವಾ.**

**– ಬಸವಣ್ಣ**

ಮನೆಯೊಳಗೆ ಮನೆಯ ಯಜಮಾನ ಅಥವ ಯಜಮಾನಿ ಯಾರಾದರೂ ಇದ್ದರೆ ಮನೆ ಸ್ವಚ್ಛವಾಗಿರುತ್ತದೆ. ಯಾರು ಇಲ್ಲದ ಮನೆಯು ಹಾಳು ಬಿದ್ದು ಬಾಗಿಲಲ್ಲಿ ಹುಲ್ಲು ಹುಟ್ಟುತ್ತದೆ. ಮನೆ ಒಳಗೆ ಕಸ ತುಂಬಿ, ದೂಳು ತುಂಬಿಕೊಂಡು ಹೊಲಸಾಗುತ್ತದೆ. ಮುಂದೆ ಮನೆಯಲ್ಲಿ ಕ್ರಿಮಿ, ಕೀಟಗಳು, ಇಲಿ, ಹೆಗ್ಗಣ ಮುಂತಾದುವುಗಳು ಸೇರಿ ಮನೆಯೇ ಬಿದ್ದು ಹಾಳಾಗಿ ಹೋಗುತ್ತದೆ. ಈ ವಚನದಲ್ಲಿ ಮೇಲು ನೋಟಕ್ಕೆ ಕಾಣುವ ಚಿತ್ರಣ ಇದು. ಆದರೆ ಅದಷ್ಟೆ ಮುಖ್ಯವಲ್ಲ. ಮನುಷ್ಯನ ದೇಹವು ಒಂದು ಮನೆಯಿದ್ದಂತೆ, ಆ ಮನೆಯಲ್ಲಿ ಅರಿವು ಎಂಬ ಒಡೆಯನಿರಬೇಕು. ಇಲ್ಲದಿದ್ದರೆ ದೇಹದ ಮೇಲೆ ಸುಳ್ಳಿನ ಭ್ರಮೆಯುಂಟಾಗಿ, ಮನಸ್ಸಿನೊಳಗೆ ಕೆಟ್ಟ ಆಲೋಚನೆಗಳೆ ತುಂಬಿ, ಸುಳ್ಳು, ಮೋಸ, ವಂಚನೆಯೆಂಬ ಕಸ, ದೂಳು ತುಂಬಿಕೊಳ್ಳುತ್ತದೆ. ಸತ್ಯ, ಶುದ್ಧ, ಪ್ರಾಮಾಣಿಕತೆಯೆಂಬ ಬದುಕಿನಿಂದ ಶರಣರು ತೋರಿದ ಆಚಾರ, ವಿಚಾರಗಳಿಂದ ಮನಸ್ಸಿನಲ್ಲಿರುವ ಹೊಲಸನ್ನು ತೊಳೆದುಕೊಂಡು ಬದುಕಿದರೆ ಆತ್ಮಜ್ಞಾನ ಲಭಿಸುತ್ತದೆ. ಅರಿವು ಮೂಡುತ್ತದೆ. ಜೀವನ ಜ್ಞಾನದ ಬೆಳಕಿನಲ್ಲಿ ಸುಂದರವಾಗುತ್ತದೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಸರ್ಕಾರಿ ಜಾಗ ಗುರುತಿಸಿ, ತ್ವರಿತವಾಗಿ ಹಸ್ತಾಂತರಿಸಲು ಮುಖ್ಯಮಂತ್ರಿ ಸೂಚನೆ

**ಹಂಪಿ ಟೈಮ್ಸ್ ಬೆಂಗಳೂರು**

PM-KUSUM Component ಅ ಯೋಜನೆಯಡಿ ಫೀಡರ್ ಸೌರೀಕರಣಕ್ಕಾಗಿ ರಾಜ್ಯದ 400 ಉಪಕೇಂದ್ರಗಳ ಬಳಿ ಸೌರ ವಿದ್ಯುತ್ ಘಟಕ ಸ್ಥಾಪನೆಗೆ ಇಂಧನ ಇಲಾಖೆಗೆ ಜಮೀನು ಹಸ್ತಾಂತರಿಸುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಕೂಡಲೇ ಕಾರ್ಯಪ್ರವೃತ್ತರಾಗಿ ಕ್ರಮ ವಹಿಸಲು ಸುತ್ತೋಲೆ ಹೊರಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು. ಬುಧವಾರ PM-KUSUM Component ಅ ಯೋಜನೆಗೆ ಗುರುತಿಸಿದ ಸರ್ಕಾರಿ ಭೂಮಿಯನ್ನು ಯೋಜನೆಯ ಅನುಷ್ಠಾನಕ್ಕಾಗಿ ಕಂದಾಯ ಇಲಾಖೆಗೆ ಹಸ್ತಾಂತರಿಸುವ ಕುರಿತು ಉನ್ನತ ಮಟ್ಟದ ಸಭೆ ನಡೆಸಿ ಮಾತನಾಡಿದರು.

400 ವಿದ್ಯುತ್ ಉಪಕೇಂದ್ರಗಳ ಸಮೀಪದಲ್ಲಿ ಫೀಡರ್ ಸೌರೀಕರಣ ಅನುಷ್ಠಾನಕ್ಕಾಗಿ 3000 ಎಕರೆ ಭೂಮಿ ಅಗತ್ಯವಿದೆ. ಜಿಲ್ಲಾಧಿಕಾರಿಗಳಿಗೆ ಭೂಮಿ ಹಂಚಿಕೆ ಮಾಡಲು ಅಧಿಕಾರ ಪ್ರತ್ಯಾಯೋಜನೆ ಮಾಡಿದರೆ ತ್ವರಿತವಾಗಿ ಯೋಜನೆ ಅನುಷ್ಠಾನ ಮಾಡಲು ಸಾಧ್ಯವಿದೆ. ಇದರಿಂದ ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ಹಗಲು ಹೊತ್ತಿನಲ್ಲೇ ವಿದ್ಯುತ್ ಪೂರೈಕೆ ಮಾಡಲು ಸಹ ಸಾಧ್ಯವಾಗುವುದು ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿಗಳು ಇಂಧನ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳು ಸ್ಥಳೀಯ ತಹಸೀಲ್ದಾರರೊಂದಿಗೆ ಜಮೀನು ಗುರುತಿಸಿ, ಸೂಕ್ತ ಪ್ರಸ್ತಾವನೆ ಕೂಡಲೇ ಕಳುಹಿಸಿ, ಹಸ್ತಾಂರಕಕ್ಕೆ ಕ್ರಮ ಕೈಗೊಳ್ಳಲು ಸೂಚಿಸಿದರು. ಖಾಸಗಿಯವರಿಗೆ ಹಸ್ತಾಂತರಿಸುವಂತಿಲ್ಲ ಎಂಬ ಷರತ್ತಿನೊಂದಿಗೆ ಹಸ್ತಾಂತರಿಸಲು ಸೂಚಿಸಿದರು. ಸಭೆಯಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ಎಲ್.ಕೆ. ಅತೀಕ್, ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಮುಖ್ಯಮಂತ್ರಿಯವರ ಕಾರ್ಯದರ್ಶಿ ಡಾ. ಕೆ.ವಿ. ತ್ರಿಲೋಕಚಂದ್ರ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಮತ್ತು ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 9448633038

# ಪಂಪನಲ್ಲಿ ಮುಖ್ಯಮಂತ್ರಿ

ಕುಪ್ಪಳಿಯಲ್ಲಿರುವ ಕವಿಮನೆ ಸ್ಮಾರಕಕ್ಕೆ ಹೋದಾಗಲೆಲ್ಲ ಕುತೂಹಲ ಹುಟ್ಟಿಸುವುದು, ಕುವೆಂಪುರವರ ಸಾರ್ವಜನಿಕ ಬದುಕಿನ ಪಟಗಳು; ಪಟಗಳಲ್ಲಿರುವ ಅವರ ವಿವಿಧ ಭಾವಸೂಚಕ ಕಣ್ನೋಟ, ಮುಖ, ಮಾತಾಡುವಾಗಿನ ಕೈವರಸೆ, ಕುಳಿತ–ನಿಂತ ಭಂಗಿಗಳು. ಲೇಖಕರ ಚಿಂತನೆ ಮತ್ತು ಸಾರ್ವಜನಿಕ ವ್ಯಕ್ತಿತ್ವವನ್ನು, ಅವರ ಮಾತು, ಜೀವನಶೈಲಿ, ಬರೆಹಗಳ ಮೂಲಕ ಕಟ್ಟಿಕೊಳ್ಳುವಂತೆ, ಪಟಗಳಲ್ಲಿರುವ ದೇಹಭಾಷೆಯ ಮೂಲಕವೂ ಕಟ್ಟಿಕೊಳ್ಳಬಹುದು.

ಕುವೆಂಪು ಆಕರ್ಷಕ ಮುಖದ ಆಜಾನುಬಾಹು. ಬಿಳಿಯ ಖಾದಿಜುಬ್ಬ ಮತ್ತು ಪೈಜಾಮ; ಅವುಗಳ ಮೇಲೆ ಉಣ್ಣೆಯ ನೀಳಕೋಟು. ತಲೆಯ ನಡುವೆ ಬೈತಲೆ ತೆಗೆದು ಎರಡೂ ಕಡೆ ಬಾಚಿದ ಗುಂಗುರುಕೂದಲು. ಫೋಟೊಜೆನಿಕ್ ಚಹರೆಯಿದ್ದರೂ ಕುವೆಂಪು ಅವರಿಗೆ ಕ್ಯಾಮೆರಾಕ್ಕೆ ಪೋಸುಕೊಟ್ಟು ಪಟ ತೆಗೆಸಿಕೊಳ್ಳುವುದು ಪ್ರಿಯ ಸಂಗತಿಯಾದಂತೆ ತೋರುವುದಿಲ್ಲ. ಎಂ.ಎ. ವಿದ್ಯಾರ್ಥಿಯಾಗಿದ್ದಾಗ ತೆಗೆದ (1927), ಬಿಎಂಶ್ರೀ, ಟಿ.ಎಸ್. ವೆಂಕಣ್ಣಯ್ಯ ಎ. ಆರ್. ಕೃಷ್ಣಶಾಸ್ತ್ರಿ ಮೊದಲಾದ ಗುರುಗಳೂ; ಡಿ.ಎಲ್. ನರಸಿಂಹಾಚಾರ್, ತೀನಂಶ್ರೀ ಮೊದಲಾಗಿ ಸಹಪಾಠಿಗಳೂ ಇರುವ ಪಟದಲ್ಲಿ, ತರುಣ ಕುವೆಂಪು ಎತ್ತಲೊ ಕಣ್ಣು ನೆಟ್ಟಿರುವರು. ಡಿವಿಜಿ, ಮಾಸ್ತಿ, ಕಾರಂತ, ವಿಸೀ, ಅನಕೃ, ರಾಜರತ್ನಂ ಜತೆ ಆಕಾಶವಾಣಿಯ ಮಾತುಕತೆಗೆಂದು ಕೂತಿರುವ ಪಟದಲ್ಲೂ ಹೀಗೇ. ಆದರೆ ಅವರನ್ನು ವೈಚಾರಿಕವಾಗಿ ಪ್ರಭಾವಿಸಿದ್ದ ಟಾಗೂರ್ ಹಾಗೂ ವಿವೇಕಾನಂದರು, ಕ್ಯಾಮೆರಾಕ್ಕೆ ಪ್ರಜ್ಞಾಪೂರ್ವಕ ಸಿದ್ಧತೆ ಮಾಡಿಕೊಂಡು ಬಗೆಬಗೆಯ ಪೋಸು ಕೊಡಬಲ್ಲವರಾಗಿದ್ದರು. ಬೇಂದ್ರೆ ಹಾಗೂ ಕಾರಂತರಿಗೂ ಕ್ಯಾಮೆರಾಕ್ಕೆ ಮುಖಕೊಡುವ ಬಗ್ಗೆ ಅಷ್ಟೊಂದು ಲಕ್ಷ್ಯವಿರಲಿಲ್ಲ. ಕೆಲವು ಕ್ಲಿಕ್ಕುಗಳಲ್ಲಿ ಕುವೆಂಪು ಪೋಸು ಕೊಟ್ಟಿದ್ದಾರೆ. ಅವುಗಳಲ್ಲಿ ಅವರ ಚಿಂತನಾಮಗ್ನ ಮುಖಭಾವದ ಪಟವೊಂದರಲ್ಲಿ ಆಳವಾದ ಭಾವಗಳಿವೆ.

ಇವುಗಳಲ್ಲೆಲ್ಲ ವಿಶೇಷವಾದವು, ಕುವೆಂಪು ಕರ್ನಾಟಕದ ಮುಖ್ಯಮಂತ್ರಿಗಳ ಜತೆಗಿರುವ ಪಟಗಳು. ಒಂದು ಸಭೆಯಲ್ಲಿ ಕೆ.ಸಿ.ರೆಡ್ಡಿಯವರು ದಿಂಬಿಗೊರಗಿ ಕೂತು, ಕುವೆಂಪು ಅವರತ್ತ ತೀಕ್ಷ್ಣವೆನ್ನಬಹುದಾದ ನೋಟ ಬೀರುತ್ತಿದ್ದಾರೆ. ಇದರ ಪರಿವೆಯಿಲ್ಲದೆ ಕುರ್ಚಿಯಲ್ಲಿ ಕೂತಿರುವ ಕುವೆಂಪು, ಎದುರುಗಡೆ ಪುಸ್ತಕವನ್ನು ಇಟ್ಟುಕೊಂಡು ತನ್ಮಯವಾಗಿ ಮಾತಾಡುತ್ತಿದ್ದಾರೆ. ಕೆಂಗಲ್ ಜತೆಗಿರುವ ಪಟದಲ್ಲಿ ಕೊರಳ ತುಂಬ ಹಾರ ಹಾಕಿಸಿಕೊಂಡಿರುವ ಅವರು, ಕೈಮುಗಿದು ಸಂಕೋಚದಲ್ಲಿದ್ದಾರೆ. ಎಸ್. ಆರ್. ಕಂಠಿಯವರ ಜತೆಗಿನ ಚಿತ್ರದಲ್ಲಿ, ಅವರು ಅಗತ್ಯಕ್ಕಿಂತ ಹೆಚ್ಚಾಗಿ ತಲೆಯೆತ್ತಿ ಎದೆಸೆಟೆಸಿ ನಿಂತಂತಿದೆ. ಅವರ ಪಕ್ಕ ಮುಖ್ಯಮಂತ್ರಿ, ಗುರುವಿನ ಪಕ್ಕ ಶಿಷ್ಯನಂತೆ ನಮ್ರವಾಗಿದ್ದಾರೆ. ಮತ್ತೊಂದು ಪಟದಲ್ಲಿ, ಕುವೆಂಪು ಗಂಭೀರಭಾವದಲ್ಲಿ ಇದು ಹೇಗಾಯಿತು ಎಂಬ ಕೈಭಂಗಿಯಲ್ಲಿ ಏನನ್ನೊ ವಿವರಿಸುತ್ತಿದ್ದರೆ, ಜತ್ತಿಯವರು ಗೌರವ ಶ್ರದ್ಧೆಗಳಿಂದ ನೋಡುತ್ತಿದ್ದಾರೆ. ವೀರೇಂದ್ರ ಪಾಟೀಲರ ಜತೆಗಿನ ಫೋಟೊದಲ್ಲಿ ಅವರ ಮಾತನ್ನು, ಮುಖ್ಯಮಂತ್ರಿಗಳು ಬೆರಗು–ಹರುಷಗಳಿಂದ ಮೈಯೆಲ್ಲ ಕಣ್ಣು ಕಿವಿಯಾಗಿ ಆಲಿಸುತ್ತಿದ್ದಾರೆ. ಇವುಗಳಲ್ಲೆಲ್ಲ ನಿಜಲಿಂಗಪ್ಪನವರ ಜತೆಗಿರುವ ಪಟ ಮತ್ತೂ ವಿಶಿಷ್ಟ. ಇದರಲ್ಲಿ ಕುವೆಂಪು ಅವರ ಬೆನ್ನಹಿಂದೆ ಅಂಟಿಕೊಂಡಂತೆ ನಿಂತಿದ್ದಾರೆ. ಬಹುಕಾಲದ ಗೆಳೆತನದ ಸಲುಗೆ ಅಲ್ಲಿದೆ. ನಿಜಲಿಂಗಪ್ಪನವರು ಮುಕ್ತವಾಗಿ ನಗುತ್ತಿದ್ದರೆ, ಕುವೆಂಪು ತುಸುವೇ ತುಟಿಯರಳಿಸಿ ಮುಗುಳ್ನಗೆ ಸೂಸುತ್ತಿದ್ದಾರೆ. ಅವರು ನಿಜಲಿಂಗಪ್ಪ ಮತ್ತು ದೇವರಾಜ ಅರಸು ಅವರ ಜತೆಗಿನ ಪಟಗಳಲ್ಲಿ ಹೆಚ್ಚು ಆಪ್ತತೆಯಲ್ಲಿ ಸಮಾನಸ್ಕಂಧರಾಗಿ ಕಾಣಿಸುತ್ತಾರೆ. ಕಾರಣ, ಇಬ್ಬರೂ ಕರ್ನಾಟಕ ಏಕೀಕರಣ, ಕನ್ನಡ ಆಡಳಿತ ಭಾಷೆ ಮತ್ತು ಕರ್ನಾಟಕದ ನಾಮಕರಣ ವಿಷಯದಲ್ಲಿ, ಅವರ ಚಿಂತನೆಯನ್ನು ಸಾಕಾರಗೊಳಿಸಿದ ಆಡಳಿತಗಾರರು. ಅವರು ನಿಜಲಿಂಗಪ್ಪನವರಿಗೆ ಬರೆದ ಪತ್ರಗಳಲ್ಲೂ ಇದೇ ವಿಷಯಗಳ ಪ್ರಸ್ತಾಪವಿದೆ. ಯಾವುದೊ ಖಾಸಗಿ ಕಾರ್ಯಕ್ರಮದಲ್ಲಿ ತೆಗೆದ ಪಟದಲ್ಲಿ ಕಡಿದಾಳು ಮಂಜಪ್ಪನವರು ಸಂಭ್ರಮದಿಂದ ನಿಂತಿದ್ದರೆ, ಕುವೆಂಪು ನಿರ್ಲಿಪ್ತ ನೋಟವನ್ನು ಎತ್ತಲೊ ಬೀರುತ್ತಿದ್ದಾರೆ.

'ಉದಯರವಿ'ಯಲ್ಲಿ ತೆಗೆಸಿಕೊಂಡ ಪಟದಲ್ಲಿ ಗುಂಡೂರಾಯರು, ಕವಿಯ ಜತೆ ವಿಚಾರವಿನಿಮಯ ಮಾಡುತ್ತಿದ್ದಾರೆ. ಯಾವುದೊ ವಿನೋದಕ್ಕೆ ಇಬ್ಬರೂ ನಗುತ್ತಿದ್ದಾರೆ. ಪ್ರಥಮ ವಿಶ್ವಕನ್ನಡ ಸಮ್ಮೇಳನದಲ್ಲಿ (1985) ಬಿಳಿದಲೆಯ ಕುವೆಂಪು, ಬಿಳಿಯ ಉಡುಪು ಧರಿಸಿ, ಹಣೆಗಿಟ್ಟ ತಿಲಕದೊಂದಿಗೆ ಮದುಮಗನಂತೆ ಆಸೀನರಾಗಿದ್ದಾರೆ. ಪಕ್ಕದಲ್ಲಿ ರಾಮಕೃಷ್ಣ ಹೆಗ್ಗಡೆ, ಶಿವರಾಮ ಕಾರಂತ, ರಾಜೀವ ಗಾಂಧಿ. ಕುವೆಂಪು ವಿಸ್ಮಯದಿಂದ ನೆರೆದ ಸಂದಣಿಯನ್ನು ದಿಟ್ಟಿಸುತ್ತಿದ್ದಾರೆ. ಸಭೆಯೊಂದರಲ್ಲಿ ದೇವೇಗೌಡರು ನಿಂತು ಕೊಡುತ್ತಿರುವ ಪುಸ್ತಕದ ಮೇಲೆ ಕೂತಿರುವ ಕುವೆಂಪು ಕಣ್ಣಾಡಿಸುತ್ತಿರುವ ಪಟವೂ ಇದೆ. ಬಂಗಾರಪ್ಪನವರು ಭಾಷಣ ಮಾಡುತ್ತಿರುವ ಸಭೆಯಲ್ಲಿ ಜೀರ್ಣದೇಹಿಯಾದ ಅವರು ತಲೆತಗ್ಗಿಸಿ ಸುಸ್ತಾದಂತೆ ಕೂತಿದ್ದಾರೆ.

ಈಯೆಲ್ಲ ಪಟಗಳಲ್ಲಿ, ಸಾರ್ವಜನಿಕ ವ್ಯಕ್ತಿಗಳ ಜತೆಯಿದ್ದಾಗ ಕುವೆಂಪು ತೋರುತ್ತಿದ್ದ ಸಂಕೋಚ, ತನ್ಮಯತೆ, ಮುಗ್ಧತೆ ಕಾಣುತ್ತವೆ. ಅವರು ಏನನ್ನಾದರೂ ವಿವರಿಸುವಾಗ ರಾಜಕಾರಣಿಗಳ ಕಣ್ಣಲ್ಲಿ ಕಣ್ಣಿಟ್ಟು ಮಾತಾಡುತ್ತಿದ್ದರೆ, ನಗುವಾಗ ಕಣ್ಣನ್ನು ನೆಲದತ್ತ ಹೊರಳಿಸುವುದೂ ತಿಳಿಯುತ್ತದೆ. ಹೆಚ್ಚಿನ ಪಟಗಳಲ್ಲಿ ಅವರು ಧೀಮಂತವಾಗಿ ನಿರಾಸಕ್ತವಾಗಿ ಇದ್ದಾರೆ. ರಾಜಕಾರಣಿಗಳು ದೊಡ್ಡ ಸಂತನ ಸನ್ನಿಧಿಯಲ್ಲಿರುವ ಉಪಾಸಕರಂತಿದ್ದಾರೆ. ಕುವೆಂಪುವರ ದೇಹಭಾಷೆ ಹೊರಸೂಸುತ್ತಿರುವ ಈ ಸ್ವಘನತೆಗೆ ಹಲವು ಕಾರಣಗಳಿವೆ.

**1** ಕವಿಯ ವ್ಯಕ್ತಿತ್ವದ ಅಲೌಕಿಕತೆಯ ಮೇಲಿನ ನಂಬಿಕೆ. ಕುವೆಂಪು ಅವರು ಸಂಸ್ಕೃತ ಕಾವ್ಯಮೀಮಾಂಸೆಯ 'ಅಪಾರೇ ಕಾವ್ಯಸಂಸಾರೆ ಕವಿರೇವ ಪ್ರಜಾಪತಿಃ', ಶೆಲ್ಲಿಯ 'ಕವಿಗಳು ನಾಡಿನ ಅನಧಿಕೃತ ಶಾಸಕರು' ಮೊದಲಾದ ತಾತ್ವಿಕ ಹೇಳಿಕೆಗಳನ್ನು ಪ್ರಾಮಾಣಿಕವಾಗಿ ನಂಬಿದ್ದವರು. ಕವಿಗಳು ಮೂಲತಃ ಋಷಿಗಳು; ನಾಡನ್ನು ಕಟ್ಟುವ ಕಣಸು ಕಾಣಬಲ್ಲ ದ್ರಷ್ಟಾರರು; ಅವರ ಕೃತಿಗಳಲ್ಲಿ ಜನರನ್ನು ಸಂವೇದನಶೀಲಗೊಳಿಸಿ ಆ ಮೂಲಕ ಲೋಕ ಬದಲಿಸುವ ಶಕ್ತಿಯಿದೆ ಎಂಬ ಮೀಮಾಂಸೆ ಅವರದು. ಇದಕ್ಕೆ ತಕ್ಕಂತೆ, ಬಿಎಂಶ್ರೀ ಕಾರಂತ ಕುವೆಂಪು ಅವರ 1947ರ ಹಿಂದಿನ ಬರೆಹಗಳು, ಬಿಡುಗಡೆಗೊಳ್ಳಲಿರುವ ಭಾರತದ ಜನಮಾನಸವನ್ನು ರೂಪಿಸುವುದಕ್ಕಾಗಿ ಮಾಡಿದ ತುಡಿತಗಳಂತಿವೆ.



**ರಹಮತ್ ತರೀಕೆರೆ**
**ಸಂಸ್ಕೃತಿ ಚಿಂತಕರು**

**2** ಲೌಕಿಕ ಯಶಸ್ಸು ಮತ್ತು ಕೀರ್ತಿಗಳ ಬಗೆಗಿನ ಅನಾಸಕ್ತಿ. ಲೇಖಕರು ಅತಿಯಾಗಿ ಸಾರ್ವಜನಿಕ ಬದುಕಿನಲ್ಲಿ ತೊಡಗುವುದು ಅಥವಾ ಅಧಿಕಾರಸ್ಥ ಸ್ಥಾನಮಾನದಲ್ಲಿರುವುದು, ಬರೆಹದ ಕಾಯಕಕ್ಕೆ ಬೇಕಾದ ಅಧ್ಯಯನ–ಧ್ಯಾನಶೀಲತೆ ಕಳೆಯುತ್ತವೆ ಎಂಬ ಗ್ರಹಿಕೆಯಿತ್ತು. ಇದಕ್ಕೆ 'ಕೀರ್ತಿಶನಿ' ಪದ್ಯವನ್ನಾಗಲಿ, ಕುಲಪತಿಯಾಗಿ ತನ್ನ ಹಾಡನ್ನು ಕೇಳುವ ವ್ಯವಧಾನ ಕಳೆದುಕೊಂಡು ರಸಚ್ಯುತಿಗೆ ಒಳಗಾದ ಕವಿಯನ್ನು ಪುಟ್ಟಹಕ್ಕಿಯೊಂದು ಕಿಚಾಯಿಸುವ ಪದ್ಯವನ್ನಾಗಲಿ ಗಮನಿಸಬಹುದು.

**3** ರಾಜಪ್ರಭುತ್ವದ ಬಗೆಗಿನ ವಿಮರ್ಶಾತ್ಮಕ ನಿಲುವು. ಕುವೆಂಪು ತಮ್ಮ ತಾರುಣ್ಯದಲ್ಲಿ, ಬಿಎಂಶ್ರೀ ಪ್ರೇರಣೆಯಿಂದ ನಾಲ್ವಡಿಯವರ ಮೇಲೆ ಪ್ರಗಾಥ ಬರೆದದ್ದುಂಟು. ಅದರಲ್ಲಿ ನಾಡನ್ನು ಕಟ್ಟುವ ದೊರೆಯ ಬಗ್ಗೆ ಮೆಚ್ಚುಗೆಯಿದೆ. ಆದರೆ ದೇಶವು ರಾಜಕೀಯ ಸ್ವಾತಂತ್ರ್ಯ ಪಡೆದ ಬಳಿಕ ಅವರು 'ಶ್ರೀಸಾಮಾನ್ಯನ ದೀಕ್ಷಾಗೀತೆ' ಬರೆದು ಸಂಭ್ರಮಿಸಿದರು. ಆ ಬಳಿಕವೂ ಹಳೆಯ ದೊರೆಗಳು ರಾಜ್ಯಪಾಲರಾಗಿ ಮುಂದುವರೆದಾಗ, ಪ್ರಜಾಪ್ರಭುತ್ವದಲ್ಲಿ ಪ್ರಭುವಿನ ವೈಭವೀಕರಣ ಸಲ್ಲದೆಂದು ಪ್ರತಿಪಾದಿಸಿದರು. ಈ ಹಿನ್ನೆಲೆಯಿಂದ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿ ಅವರು ರಾಜ್ಯಪಾಲರೂ ಕುಲಾಧಿಪರಿಗಳೂ ಆದ ಜಯಚಾಮರಾಜೇಂದ್ರ ಒಡೆಯರವರ ಜತೆ ಕುಳಿತಿರುವ ಪಟವನ್ನು ಗಮನಿಸಬೇಕು. ಕುವೆಂಪು ಮಿರಿವ ಶೂಧರಿಸಿ ಕತ್ತರಿಗಾಲು ಹಾಕಿಕೊಂಡು ಗಂಭೀರವಾಗಿ ಕೂತಿದ್ದರೆ, ಚಿಕ್ಕವಯಸ್ಸಿನ ಒಡೆಯರವರು ವಿನಯದಲ್ಲಿ ಕೂತಿದ್ದಾರೆ. ಇದಕ್ಕೆ ಒಂದು ಒಡೆಯರವರು ಕುವೆಂಪು ವಿದ್ಯಾರ್ಥಿಯಾಗಿದ್ದುದೂ ಇರಬೇಕು. ಅವರು ಕನ್ನಡದಲ್ಲಿ ಫೇಲಾದಾಗ, ನಾಲ್ವಡಿಯವರು ವಿಭಾಗ ಮುಖ್ಯಸ್ಥರಾದ ಟಿ.ಎಸ್. ವೆಂಕಟಣಯ್ಯನವರನ್ನು ಕರೆಯಿಸಿಕೊಂಡು ಸಮಸ್ಯೆಯ ಪರಾಮರ್ಶೆ ನಡೆಸುತ್ತಾರೆ. ಆಗ ವೆಂಕಣ್ಣಯ್ಯನವರು ರಾಜಕುಮಾರನಿಗೆ ಕುವೆಂಪುರವರಿಂದ ಟ್ಯೂಶನ್ ಹೇಳಿಸಿ, ಮರುಪರೀಕ್ಷೆ ಬರೆಯುವ ಮಾರ್ಗ ಸೂಚಿಸುತ್ತಾರೆ. ಆದರೆ ಕುವೆಂಪು ಗುರುಗಳ ಸೂಚನೆಯನ್ನು ನಯವಾಗಿ ನಿರಾಕರಿಸುತ್ತಾರೆ. ಇಲ್ಲಿ ಕೆಲವು ಸೂಫಿಗಳು, ಸುಲ್ತಾನರ ಭೇಟಿಯನ್ನು ತಪ್ಪಿಸಿಕೊಳ್ಳುತ್ತಿದ್ದ, ಭೇಟಿಯಾಗಲೇ ಬೇಕಾದಾಗ ನಿಷ್ಠುರವಾಗಿ ವರ್ತಿಸುತ್ತಿದ್ದ ನಿದರ್ಶನಗಳು ನೆನಪಾಗುತ್ತವೆ. ಶಾಹುಮಹಾರಾಜರ ಜತೆಗೆ ಕುಳಿತಿರುವ ಸಿದ್ಧಾರೂಢ ಸ್ವಾಮಿಗಳು ಕುಳಿತಿರುವ ಪಟವೂ ನೆನಪಾಗುತ್ತದೆ.

**4** ರಾಜಕಾರಣಿಗಳಲ್ಲಿದ್ದ ಸಾಂಸ್ಕೃತಿಕ ವ್ಯಕ್ತಿತ್ವ. ತಮ್ಮ ಕಾಲದ ಸೆಲೆಬ್ರಿಟಿಯಾಗಿದ್ದ ಕುವೆಂಪು, ಕನ್ನಡಕ್ಕೆ ಮೊದಲ ಜ್ಞಾನಪೀಠ ತಂದುಕೊಟ್ಟು, ಕನ್ನಡತ್ವದ ಪ್ರತೀಕವೆನಿಸಿದ್ದರು. ಅವರೊಟ್ಟಿಗೆ ಗುರುತಿಸಿಕೊಳ್ಳುವುದನ್ನು ರಾಜಕಾರಣಿಗಳು ಹೆಮ್ಮೆಯೆಂದು ಭಾವಿಸಿದ್ದರು. ನಾಡು–ನುಡಿಯ ವಿಷಯಗಳಿದ್ದಾಗ ರಾಜಗುರುವಿನಂತಿದ್ದ ಅವರ ಮನೆಗೆ ಹೋಗಿ ಚರ್ಚಿಸುತ್ತಿದ್ದರು. ಜತೆಗೆ ಕಡಿದಾಳು, ರಾಮಕೃಷ್ಣ ಹೆಗಡೆ, ಎಸ್.ಎಂ. ಕೃಷ್ಣ, ವೀರಪ್ಪ ಮೊಯಿಲಿ, ಬಂಗಾರಪ್ಪ ಮೊದಲಾದವರು ಸಾಹಿತ್ಯ ಕಲೆಗಳ ಲೋಕದ ಬಗ್ಗೆ ವೈಯಕ್ತಿಕವಾಗಿ ಆಸಕ್ತಿ–ಆದರ ಹೊಂದಿದ್ದರು.

**5** ವೈಯಕ್ತಿಕ ಆಶೋತ್ತರಗಳಿಲ್ಲದ ವ್ಯಕ್ತಿತ್ವ. ಕುವೆಂಪು ಅವರಿಗೆ ಸ್ವಂತ ಕೆಲಸಕ್ಕೆ ಅಧಿಕಾರಸ್ಥರ ಎದುರು ತಗ್ಗಿ ನಿಲ್ಲುವ ಸನ್ನಿವೇಶ ಬಂದಂತಿಲ್ಲ. ಕನ್ನಡದ ಅಥವಾ ವಿಶ್ವವಿದ್ಯಾಲಯದ ವಿಷಯದಲ್ಲಿ ಸರ್ಕಾರದ ನೀತಿನಿರೂಪಣೆ ಬಂದಾಗ, ಅವರು ಪ್ರಭುತ್ವದವರನ್ನು ಭೇಟಿ ಮಾಡುತ್ತಿದ್ದರು. ರಾಜಕೀಯ ಅಧಿಕಾರಸ್ಥರು ಕನ್ನಡ–ಕರ್ನಾಟಕದ ವಿಷಯದಲ್ಲಿ ಆಲಸ್ಯ ತೋರಿದಾಗ ವ್ಯಗ್ರರಾಗುತ್ತಿದ್ದರು. ಅವರು ಅಧಿಕಾರಸ್ಥ ರಾಜಕಾರಣಿಗಳನ್ನು ಕಟುವಾಗಿ ಟೀಕಿಸುವ 'ಅಖಂಡ ಕರ್ನಾಟಕ' ಪದ್ಯದಲ್ಲಿ, 'ಇಂದು ಬಂದು ನಾಳೆ ಸಂದುಹೋಹ ಸಚಿವ ಮಂಡಲ'ದ ವಿಡಂಬನೆಯಿದೆ. ಪರ್ಯಾಯವಾಗಿ 'ನೃಪತುಂಗನೆ ಚಕ್ರವರ?ತಿ! ಪಂಪನಲ್ಲಿ ಮುಖ್ಯಮಂತ್ರಿ' ಆಗಿರುವ ಸರಸ್ವತಿ ರಚಿಸಿದ ನಿತ್ಯ ಮಂತ್ರಿಮಂಡಲದ ಮಂಡನೆಯಿದೆ. ಬಿಜ್ಜಳನ ಗದ್ದುಗೆಯ ಕೆಳಗೆ ಕುಳಿತು ಓಲೈಸುವವನು ಎಂಬ ಆಪಾದನೆ ಬಂದಾಗ ಕೆರಳಿದ ಬಸವಣ್ಣ, ಕೂಡಲಸಂಗಮನೇ ನಿಜವಾದ ದೊರೆ ಎಂದುತ್ತರಿಸುವ ವಚನದ ಮಾದರಿಯಿದು.

ಕುವೆಂಪುಗೆ ಹೋಲಿಸಿದರೆ, ಅಧಿಕಾರಸ್ಥರು ಮನೆಗೆ ಬಂದಾಗ ಬೇಂದ್ರೆಯವರು ಅತಿಯೆಚ್ಚರ ವಹಿಸುತ್ತಿದ್ದರು. ಒಮ್ಮೆ ಕುಲಪತಿ ಪಾವಟೆಯವರು ಮನೆಗೆ ಬರುತ್ತಾರೆಂದು ತಿಳಿದಾಗ, ತಮ್ಮ ಭೇಟಿಗೆಂದು ಬಂದಿದ್ದ ಯುವಕ ಕೆ.ವಿ. ಸುಬ್ಬಣ್ಣನವರನ್ನು ಬೇಂದ್ರೆ ಹೊರಕಳಿಸುತ್ತಾರೆ. ಬೇಂದ್ರೆಯವರಿಂದ ಬದುಕಿಗೆ ಮಾರ್ಗದರ್ಶನ ಪಡೆದುಕೊಳ್ಳಲು ಬಂದಿದ್ದ ಸುಬ್ಬಣ್ಣನವರಿಗೆ ಭ್ರಮನಿರಸನ ಉಂಟುಮಾಡುತ್ತದೆ. ಬಳಿಕ ಅವರು ಕಾರಂತರನ್ನು ಮಾದರಿಯಾಗಿಸಿಕೊಳ್ಳುವ ನಿರ್ಧಾರ ತಳೆಯುತ್ತಾರೆ. ಕಾರಂತರಾದರೂ ರಾಜಕಾರಣಿಗಳ ಜತೆ ಬಿಗುವಾಗಿ ವರ್ತಿಸುತ್ತಿದ್ದರು. ರಾಜಕೀಯ ಚಳುವಳಿಗೆಂದು ಕಾಲೇಜು ತೊರೆದ, ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋತಿದ್ದ ಅವರು, ರಾಜಕಾರಣಿಗಳನ್ನು ಸಭೆಗಳಲ್ಲಿ ಕಟುವಾಗಿ, ಕೆಲವೊಮ್ಮೆ ಸಿನಿಕವಾಗಿ ಟೀಕಿಸುತ್ತಿದ್ದರು.

ಲೇಖಕರು ತಮ್ಮ ಘನತೆ ವಿವೇಕ ನಿಷ್ಠುರತೆಯಿಂದ ಆಳುವವರನ್ನು ಪ್ರಭಾವಿಸುವ ಮತ್ತು ಕರೆದುಬುದ್ಧಿ ಹೇಳುವ; ಅಥವಾ ರಾಜಕಾರಣಿಗಳು ಅವರಲ್ಲಿ ಹೋಗಿ ಸಲಹೆ ಕೇಳುವ ದಿನಗಳು ಬೇಗನೆ ಕಣ್ಮರೆಯಾದವು. ಈಗ ರಾಜಕಾರಣಿಗಳನ್ನು ಕರೆಸಿಕೊಂಡು ಬುದ್ಧಿ ಹೇಳುವ ಅಧಿಕಾರವನ್ನು ಧಾರ್ಮಿಕ ನಾಯಕರು ಹಾಗೂ ಉದ್ಯಮಿಗಳು ಚಲಾಯಿಸುತ್ತಿದ್ದಾರೆ. ಈ ದುಷ್ಕಾಲದಲ್ಲೂ ಲೇಖಕರ ನೈತಿಕತೆ ಘನತೆ ಉಳಿಸಿಕೊಂಡ ಲೇಖಕರಲ್ಲಿ ದೇವನೂರರಂತಹ ಕೆಲವರು ಉಳಿದಿದ್ದಾರೆ.

ಅಧಿಕಾರಸ್ಥರ ಜತೆ ಲೇಖಕರು ಕಲಾವಿದರು ಸಂಬಂಧ ಇರಿಸಿಕೊಳ್ಳುವುದಕ್ಕೆ ಕನ್ನಡದಲ್ಲಿ ನಿಡಿದಾದ ಪರಂಪರೆಯಿದೆ. ಶ್ರೀವಿಜಯನ 'ಕವಿರಾಜಮಾರ್ಗ'ದ ಹೆಸರಲ್ಲೇ ಇದರ ಚಿಹ್ನೆಯಿದೆ. ಪಂಪ, ಬಸವಣ್ಣ, ಬಿಎಂಶ್ರೀ, ಕಟ್ಟೀಮನಿ, ಲಂಕೇಶ್, ಅನಂತಮೂರ್ತಿ, ಬರಗೂರು, ಸಿದ್ಧಲಿಂಗಯ್ಯ, ಕಂಬಾರರು– ವಿವಿಧ ಪರಿಯಲ್ಲಿ ನಂಟಿದ್ದವರೇ. ಲೇಖಕ–ರಾಜಕಾರಣಿಗಳ ಈ ನಂಟಸ್ತಿಕೆ ತನಗೆತಾನೇ ದೋಷವೂ ಅಲ್ಲ, ಹಿರಿಮೆಯೂ ಅಲ್ಲ. ಈ ನಂಟು ವೈಯಕ್ತಿಕ ಮಹತ್ವಾಕಾಂಕ್ಷೆಯಿಂದ ಕೂಡಿದೆಯೊ, ಸಾಮುದಾಯಿಕ ಹಿತವುಳ್ಳದ್ದಾಗಿದೆಯೊ? ಈ ನಂಟಿನ ಸ್ವರೂಪ ಸಮಾನಮನಸ್ಕ ಸ್ನೇಹದಲ್ಲಿದೆಯೊ, ಘನತೆ ಸ್ವಾಭಿಮಾನ ಕಳೆದುಕೊಂಡು ಓಲೈಸುವ ಭಾವದಲ್ಲಿದೆಯೊ? ಆಳುವವರು ಸರ್ವಾಧಿಕಾರಿ ಆಗಿದ್ದಾಗ ಲೇಖಕರು ನಿಷ್ಠುರವಾಗಿದ್ದಾರೊ ಕೀರ್ತಿಸುತ್ತಿದ್ದಾರೊ? ನಮ್ಮ ಬದುಕನ್ನೆ ಬದಲಾಯಿಸುವ ಶಕ್ತಿಯುಳ್ಳ ಶಕ್ತಿರಾಜಕಾರಣವನ್ನೇ ಅನಿಷ್ಟವೆಂದು ಪರಿಭಾವಿಸುವ ಸಿನಿಕತೆ ಪ್ರಕಟಿಸುತ್ತಿದ್ದಾರೊ? ಇವು ಕೇಳಿಕೊಳ್ಳಬೇಕಾದ ಪ್ರಶ್ನೆಗಳು.

ತನ್ನ ದೇಶದ ಸರ್ವಾಧಿಕಾರಿಗಳನ್ನು ವಿರೋಧಿಸುತ್ತ ಬಂಧನ ಭೀತಿಯಿಂದ ಭೂಗತನಾಗಿದ್ದ ಚಿಲಿಯ ಕವಿ ನೆರೂಡ, ಸಮಾಜವಾದಿ ಕಾಣ್ಕೆಯ ಮೂಲಕ ದೇಶ ಕಟ್ಟಲೆಂದು ಆಯ್ಕೆಯಾದ ಅಲೆಂಡೆಯ ಬೆನ್ನಿಗೆ ನಿಂತಿದ್ದನು. ಅಧಿಕಾರಸ್ಥರು ದುಷ್ಟರಾಗಿದ್ದಾಗ, ಎಚ್ಚರ ಕಳೆದುಕೊಂಡೊ ಸ್ವಾರ್ಥಕ್ಕಾಗಿಯೊ ಬೆಂಬಲಿಸಿದ ಅನೇಕ ಲೇಖಕರು ಜೀವಮಾನವಿಡೀ ಪರಿತಪಿಸಿದ ನಿದರ್ಶನಗಳೂ ಇವೆ. ಯಾಕೆಂದರೆ, ಪ್ರಭುತ್ವದ ಜತೆಗಿನ ಸಂಬಂಧದ ಸ್ವರೂಪವು, ಲೇಖಕರ ಬರೆಹದ ನೈತಿಕತೆ ಮತ್ತು ಕಸುವನ್ನು ನಿರ್ಣಯಿಸುವ ಸಂಗತಿ ಕೂಡ. ಕುವೆಂಪು ಬರೆಹ ಮತ್ತು ವ್ಯಕ್ತಿತ್ವಗಳ ಘನತೆಯ ಒಂದಂಶವು, ಅವರು ಅಧಿಕಾರಸ್ಥರ ಜತೆಗಿರಿಸಿಕೊಂಡ ನಂಟಿನ ಸ್ವರೂಪದಲ್ಲೂ ಇದ್ದಂತಿದೆ.

# ಮಧ್ಯವರ್ತಿಗಳನ್ನು ದೂರವಿರಿಸಿ ಜನಸೇವೆ ಮಾಡಿ

### ತಹಶೀಲ್ದಾರ್ ಕಚೇರಿಗೆ ಬರುವವರ ಕಣ್ಣೀರು ಒರೆಸುವುದಕ್ಕಿಂತ ಪುಣ್ಯದ ಕೆಲಸ ಬೇರೆ ಇಲ್ಲ: ಕೆಎಎಸ್ ಅಧಿಕಾರಿಗಳಿಗೆ ಸಿಎಂ ಕಿವಿ ಮಾತು

**ಹಂಪಿ ಟೈಮ್ಸ್ ಬೆಂಗಳೂರು:**

ತಹಶೀಲ್ದಾರ್ ಕಚೇರಿಗೆ ಬರುವವರ ಕಣ್ಣೀರು ಒರೆಸುವುದಕ್ಕಿಂತ ಪುಣ್ಯದ ಕೆಲಸ ಬೇರೆ ಇಲ್ಲ. ಮಾಸಲು ಬಟ್ಟೆಯಲ್ಲಿ ಚಡ್ಡಿಯಲ್ಲಿ ಬರುವ ಬಡವರ ಕಣ್ಣೀರು ಒರೆಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರೆ ನೀಡಿದರು.

ಕರ್ನಾಟಕ ಆಡಳಿತಾ ಸೇವಾ ಅಧಿಕಾರಿಗಳ ಸಂಘದ 2024ನೇ ಸಾಲಿನ ದಿನಚರಿ ಮತ್ತು ವಾರ್ಷಿಕ ಕ್ಯಾಲೆಂಡರ್ ಬಿಡುಗಡೆ ಮಾಡಿ ಮಾತನಾಡಿದರು.

ಸವೆದ ಚಪ್ಪಲಿ, ಹರಕಲು ಚೆಡ್ಡಿ, ಮಾಸಿದ ಬಟ್ಟೆ, ಅವಿದ್ಯಾವಂತರ ಪರವಾಗಿ ನಿಮ್ಮಗಳ ಹೃದಯ ಮಿಡಿಯಬೇಕು. ನೀವು ಒಳ್ಳೆ ಕೆಲಸ ಮಾಡಿದರೆ ಸರ್ಕಾರಕ್ಕೆ ಒಳ್ಳೆ ಹೆಸರು ಬರುತ್ತದೆ. ಈ ಜವಾಬ್ದಾರಿಯನ್ನು ನಿರ್ವಹಿಸಿ, ಮಧ್ಯವರ್ತಿಗಳನ್ನು ನಿಮ್ಮ ಕಚೇರಿ ಬಳಿ ಸೇರಿಸದೆ ಜನರ ಸೇವೆ ಮಾಡಿ ಎಂದರು.

ನಾವು ನೀವು ರಾಜ್ಯದ 7 ಕೋಟಿ ಜನರ ಹಿತ ಕಾಯುವುದಕ್ಕಾಗಿ ಇದ್ದೇವೆ. ರಾಜಕಾರಣಿಗಳು ಜನರಿಂದ ರಿನೀವಲ್ ಆದರೆ ಮಾತ್ರ ಐದು ವರ್ಷದ ಬಳಿಕವೂ ಜನ ಸೇವೆಯಲ್ಲಿ ಇರ್ತಾರೆ. ಆದರೆ ಕೆಎಎಸ್ ಅಧಿಕಾರಿಗಳು 30 ವರ್ಷಗಳ ಕಾಲ ನಿರಂತರ ಜನ ಸೇವೆಯಲ್ಲಿ ಇರುತ್ತೀರಿ. ಆದ್ದರಿಂದ



ಹೆಚ್ಚು ಜನಪರವಾಗಿ ಇದ್ದು ಜನರ ಕಷ್ಟ ಸುಖಗಳಿಗೆ ಸ್ಪಂದಿಸಿ ಎಂದು ಕರೆ ನೀಡಿದರು.

ರಾಜಕಾರಣಗಳಿಗೆ, ಅಧಿಕಾರಿಗಳಿಗೆ ಜನರು ಸವಲತ್ತುಗಳನ್ನು ಒದಗಿಸಿದ್ದಾರೆ. ಜನರ ತೆರಿಗೆ ಹಣದಲ್ಲಿ ನಮಗೆ ಸವಲತ್ತುಗಳು ಸಿಕ್ಕಿವೆ. ಸುಗಮ ಜನಪರ ಆಡಳಿತ ಕೊಡಲಿ ಎನ್ನುವ ಕಾರಣದಿಂದ ಜನರಿಂದ ನಮಗೆ ಸವಲತ್ತು ಸಿಕ್ಕಿವೆ. ಜನರ ಅಭ್ಯದಯ ನಮ್ಮ ಗುರಿ ಆಗಬೇಕು ಎಂದರು. ಬಲಾಢ್ಯರು ದುರ್ಬಲರ ಮೇಲೆ ದೌರ್ಜನ್ಯ ನಡೆಸದಂತೆ ಎಚ್ಚರಿಕೆ ವಹಿಸಿ. ಸರ್ಕಾರದ ಸವಲತ್ತುಗಳನ್ನು ಅರ್ಹ ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ತಲುಪಿಸಿ ಎಂದು ಕರೆ ನೀಡಿದರು.


ಸಣ್ಣ ಪುಟ್ಟ ರೆವಿನ್ಯೂ ಸಮಸ್ಯೆಗಳಿಗೆ ಜನರು ಸಿಎಂ ಬಳಿಗೆ ಬರುತ್ತಾರೆ ಎಂದರೆ ಅಧಿಕಾರಿಗಳು ಜನರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ ಎಂದೇ

> **ಕೆಎಎಸ್ ಅಧಿಕಾರಿಗಳು 30 ವರ್ಷಗಳ ಕಾಲ ನಿರಂತರ ಜನ ಸೇವೆಯಲ್ಲಿ ಇರುತ್ತೀರಿ. ಆದ್ದರಿಂದ ಹೆಚ್ಚು ಜನಪರವಾಗಿ ಇದ್ದು ಜನರ ಕಷ್ಟ ಸುಖಗಳಿಗೆ ಸ್ಪಂದಿಸಿ. ಜನರ ತೆರಿಗೆ ಹಣದಲ್ಲಿ ಅಧಿಕಾರಿಗಳು, ರಾಜಕಾರಣಿಗಳು ಸೌಲಭ್ಯ ಅನುಭವಿಸುತ್ತಿದ್ದೇವೆ ಎನ್ನುವುದನ್ನು ಮರೆಯಬಾರದು**
>
> **– ಸಿದ್ದರಾಮಯ್ಯ, ಮುಖ್ಯಮಂತ್ರಿ**

ಪರಿಗಣಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಕೆಎಎಸ್ ಅಧಿಕಾರಿಗಳ ಸಂಘದ ಅಧ್ಯಕ್ಷರಾದ ಶಿವಸ್ವಾಮಿ ಅವರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕಂದಾಯ ಸಚಿವರಾದ ಕೃಷ್ಣಬೈರೇಗೌಡ, ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರಾದ ಬೈರತಿ ಸುರೇಶ್, ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಗೋವಿಂದರಾಜು, ಕಂದಾಯ ಇಲಾಖೆ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಕಂದಾಯ ಇಲಾಖೆ ಆಯುಕ್ತರಾದ ಪಿ.ಸುನಿಲ್ ಕುಮಾರ್, ಸಂಘದ ಉಪಾಧ್ಯಕ್ಷರಾದ ಚನ್ನಬಸಪ್ಪ ಅವರು ವೇದಿಕೆಯಲ್ಲಿದ್ದರು.

## ಕವಿ ಮನಸು

### ಶ್ವೇತ ವಸ್ತ್ರಧಾರಿ ಮುತ್ಯಾ



ಶ್ವೇತ ವಸ್ತ್ರಧಾರಿ ಮುತ್ಯಾನೀತ
ಹಸನ ಹಾದಿಯಲಿ ನಡೆದ ತಾತ
ಸರಳ ಸಜ್ಜನ ಮಾರ್ಗ ಹಿಡಿದಾತ
ವಿಜಯಪುರದ ನಿವಾಸಿ ಈ ತಾತ

ಶಾಂತಿ ಮಂತ್ರವ ಭೋದಿಸಿದಾತ
ಕಾಂತಿ ಕಿರಣವ ಜಗಕೆ ಬೀರಿದಾತ
ನಿಸ್ವಾರ್ಥವೇನೆಂಬುದ ತೋರಿದಾತ
ವಿಜಯಪುರದ ನಿವಾಸಿ ಈ ತಾತ

ಸಿದ್ದೇಶ್ವರ ನಾಮದಿ ಉದಿಸಿದಾತ
ಈ ಜಗವ ಉದ್ದರಿಸ ಬಂದ ತಾತ
ಸದಾ ಭಕ್ತರ ಮನದಿ ನೆಲೆಸಿದಾತ
ವಿಜಯಪುರದ ನಿವಾಸಿ ಈ ತಾತ


ಮಾಡುವಾಗ ನೀ ಪುರಾಣ ಪ್ರವಚನ
ಮಂಟಪ ಹೇಳುತಿತ್ತು ಸೂಜಿಬಿದ್ದ ಕ್ಷಣ
ಆಗುವಾಗಲೇ ಜನಮನ ಪರಿವರ್ತನ
ಮಾಡಿಬಿಟ್ಟೆ ನೀ ಬಾರದೂರಿಗೆ ಪಯಣ

ಮತ್ತೊಮ್ಮೆಈ ಜಗಕೆ ಉದಿಸಿ ಬಾರೋ
ಸನ್ಮಂಗಳವ ಹರಸಿ ಸುನಿಧಿಯ ತಾರೋ
ಭಕ್ತರೆಲ್ಲ ನಿನ್ನ ಹಾದಿ ಕಾಯುತಾರೋ
ಕಾಯಿಸದೆ ಅವತರಿಸಿ ಬೇಗ ಬಾರೋ

– ಕೆ ಎಂ ಬಸವರಾಜ
ನಿವೃತ್ತ ಇಂಜನೀರ್, ಹೊಸಪೇಟೆ




## ತುಂಗಭದ್ರಾ ನೀರಿನ ಮಟ್ಟ



| ಬುಧವಾರ : 03-01-2024 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1589.06 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 00 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 10.262 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1624.15ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 8648 ಕ್ಯುಸೆಕ್ |
| ಸಾಮರ್ಥ್ಯ | 73.746 ಟಿಎಂಸಿ |

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಗರಡಿ ಕುಸ್ತಿ ಮಾಸ್ಟರ್ ಶಿವಾನಂದ್

**ಕುಸ್ತಿ ಕ್ರೀಡೆಗೆ ಜೀವಮಾನ ಸಾಧನಾ ಪ್ರಶಸ್ತಿ ಪಡೆದ ಕರ್ನಾಟಕದ ಮೊದಲಿಗರು | ಇವರ ಗರಡಿಯಲ್ಲಿ ಪಳಗಿದ ಪಟುಗಳು ಸರ್ಕಾರಿ ಹುದ್ದೆಗಳಲ್ಲಿ ನೇಮಕ**

ದಾವಣಗೆರೆಗೆ ಹೊಂದಿಕೊಂಡಿರುವ ಊರು ತೋಳಹುಣಸೆ ಇದು ರಾಜ್ಯದಲ್ಲಿ ಅತ್ಯಂತ ಹೆಚ್ಚು ಸೈನಿಕರನ್ನು ದೇಶಕ್ಕೆ ಕೊಡುಗೆ ನೀಡಿರುವ ಎರಡನೇ ಹಳ್ಳಿ. ದಾವಣಗೆರೆಯ ಖ್ಯಾತ ಕುಸ್ತಿಪಟು ದಿವಂಗತ ಪೈಲ್ವಾನ್ ರೇಖ್ಯಾನಾಯ್ಕರವರು 'ಯಲ್ಲಮ್ಮ ಮೀಲ್ಸ್ ಗರಡಿ' ಮನೆಯನ್ನು 1982 ರಲ್ಲಿ ತೋಳಹುಣಸೆ ಊರಿನ ಯುವಕರು ಆರೋಗ್ಯ ವೃದ್ಧಿಸಿಕೊಳ್ಳಲು ನಿರ್ಮಿಸುತ್ತಾರೆ ಇದರ ಪ್ರಯೋಜನ ಪಡೆದುಕೊಂಡ ಅದೆಷ್ಟೋ ಯುವಕರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ದೃಷ್ಟಿಯಲ್ಲಿ ಕಸರತ್ತನ್ನು ಪ್ರಾರಂಭಿಸಿ ಸಾಕಷ್ಟು ಕ್ರೀಡಾ ಸಾಧನೆಗಳನ್ನು ಮಾಡಿರುತ್ತಾರೆ ಅವರಲ್ಲಿ ಸಾಕಷ್ಟು ಕುಸ್ತಿಪಟುಗಳಲ್ಲದೆ ಶಶಿಬಾಯಿ(ಅಂತರಾಷ್ಟ್ರೀಯ), ನಾಗರಾಜ ನಾಯಕ(ರಾಷ್ಟ್ರೀಯ) ಕಬ್ಬಡಿ ಕ್ರೀಡೆಯಲ್ಲಿ ಖ್ಯಾತಿಗಳಿಸಿರುತ್ತಾರೆ.

ಇವರ ಕುಟುಂಬವೇ ಒಂದು ಕ್ರೀಡಾ ಕುಟುಂಬ ಇವರಿಗಿದ್ದ 07 ಮಕ್ಕಳಲ್ಲಿ ಎಲ್ಲರೂ ಕ್ರೀಡಾಪಟುಗಳು ಅದರಲ್ಲಿ ಪ್ರಮುಖವಾಗಿ ದಿವಂಗತ ಪೈಲ್ವಾನ್ ಸುರೇಶ್ ನಾಯಕ್ ಹಾಗೂ ಶಿವಾನಂದ್ ರವರು ತಂದೆಯ ಆಸೆಯಂತೆ ಕುಸ್ತಿ ಕ್ರೀಡೆಯನ್ನು ಮೈಗೂಡಿಸಿಕೊಂಡರು. ತಾಯಿ ಹಾಲಮ್ಮ ತನ್ನೆಲ್ಲ ಮಕ್ಕಳಿಗೂ ಆರೈಕೆ ಮಾಡಿದರು.

ಶಿವಾನಂದ ರವರು 14–01–1975 ರಲ್ಲಿ ಜನಿಸಿರುತ್ತಾರೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ತೋಳಹುಣಸೆಯ ಸರ್ಕಾರಿ ಶಾಲೆ ಹಾಗೂ ಶ್ರೀ ಲಿಂಗೇಶ್ವರ ಪ್ರೌಢಶಾಲೆ, ಪದವಿಪೂರ್ವ ಶಿಕ್ಷಣವನ್ನು ಮಂಜುನಾಥ ಕಾಲೇಜು ಹಾಗೂ ಪದವಿಯನ್ನು ಎ,ಆರ್,ಜಿ ಕಾಲೇಜು ದಾವಣಗೆರೆಯಲ್ಲಿ ಪೂರ್ಣಗೊಳಿಸಿ 1998–99 ಕುಸ್ತಿಯಲ್ಲಿ ತರಬೇತು ಪಡೆಯಲು ಪಂಜಾಬ್ ನ ಪಾಟಿಯಾಲದಲ್ಲಿರುವ ಎನ್.ಐ.ಎಸ್ ತರಬೇತಿ ಕೇಂದ್ರಕ್ಕೆ ತೆರಳಿ ಡಿಪ್ಲೋಮಾ ಪದವಿಯನ್ನು ಪಡೆಯುತ್ತಾರೆ.

ಇವರ ವಯಕ್ತಿಕ ಕ್ರೀಡಾ ಸಾಧನೆಯನ್ನು ಗಮನಿಸುವುದಾದರೆ 1989 ಕಲ್ಕತ್ತಾದಲ್ಲಿ ನಡೆದ ರೂರಲ್ ನ್ಯಾಷನಲ್ ಸ್ಕೂಲ್ ಗೇಮ್ ನಲ್ಲಿ ನಾಲ್ಕನೇ ಸ್ಥಾನವನ್ನು ಪಡೆದಿರುತ್ತಾರೆ.

ಗರಡಿ ಮನೆಗಳಲ್ಲಿ ತಮ್ಮ ಅಣ್ಣನೊಂದಿಗೆ ಪಟ್ಟು ಕಲಿತ ಇವರು ಅಷ್ಟಾಗಿ ಪಾಯಿಂಟ್ ಕುಸ್ತಿ ಬಗ್ಗೆ ಪರಿಣಿತಿ ಹೊಂದಿರಲಿಲ್ಲ ದಾವಣಗೆರೆ ಕುಸ್ತಿ ಹಾಸ್ಟೆಲ್ ಗೆ ಬಂದಂತಹ ಇವರ ಗುರುಗಳಾದ ಶ್ರೀನಿವಾಸ್ ಗೌಡರ ಸಹಕಾರದಿಂದ ಕುಸ್ತಿಪಟ್ಟುಗಳನ್ನು ಕಲಿತು ಕುವೆಂಪು ವಿಶ್ವವಿದ್ಯಾಲಯವನ್ನು 05 ಬಾರಿ ಅಂತರ ವಿಶ್ವವಿದ್ಯಾನಿಲಯ ಕುಸ್ತಿ ಕ್ರೀಡಾಕೂಟಕ್ಕೆ ಪ್ರತಿನಿಧಿಸಿ 1996 ರಲ್ಲಿ ಕೊಲ್ಲಾಪುರ ವಿಶ್ವವಿದ್ಯಾನಿಲಯದಲ್ಲಿ ನಡೆದ ಆಲ್ ಇಂಡಿಯಾ ಇಂಟರ್ ಯುನಿವರ್ಸಿಟಿ ಕುಸ್ತಿ ಸ್ಪರ್ಧೆಯಲ್ಲಿ ತೃತೀಯ ಸ್ಥಾನವನ್ನು ಪಡೆದಿರುತ್ತಾರೆ.

ಅದೇ ವರ್ಷ ಭಾಗವಹಿಸಿದ 'ಮೈಸೂರು ದಸರಾ ಕುಸ್ತಿ' ಸ್ಪರ್ಧೆಯಲ್ಲಿ 52 ಕೆಜಿ ವಿಭಾಗದಲ್ಲಿ ಚಿನ್ನದ ಪದಕವನ್ನು ಪಡೆದಿರುತ್ತಾರೆ.

ನ್ಯಾಷನಲ್ ಗೇಮ್ ಕ್ಯಾಂಪ್ ಗೆ ಆಯ್ಕೆಗೊಂಡು ತರಬೇತಿಯಲ್ಲಿದ್ದ ಇವರು ಕ್ರೀಡಾಘಾತಕ್ಕೆ ಒಳಗಾಗದ ಪರಿಣಾಮ ವೈಯಕ್ತಿಕ ಭಾಗವಹಿಸುವಿಕೆಯಿಂದ ದೂರ ಉಳಿಯುವಂತಾಯಿತು.

ತಮ್ಮ ತರಬೇತುದರಾದ ಶ್ರೀನಿವಾಸ್ ಗೌಡರ ಸಹಕಾರದಿಂದ 2000 ರಲ್ಲಿ ದಾವಣಗೆರೆ ಯುವಜನ ಸೇವಾ ಇಲಾಖೆಯ ಕುಸ್ತಿ ತರಬೇತಿ ಕೇಂದ್ರದಲ್ಲಿ ಸಹಾಯಕ ತರಬೇತುದಾರರಾಗಿ ಆಯ್ಕೆಗೊಳ್ಳುತ್ತಾರೆ ಒಟ್ಟು 22 ವರ್ಷ ಸೇವೆಯನ್ನು ಸಲ್ಲಿಸಿದ್ದು ಪ್ರಸ್ತುತ ಸರ್ಕಾರದ ಆದೇಶದ ಮೇರೆಗೆ ಹಳಿಯಾಳದ ಯುವಜನ ಸೇವಾ ಇಲಾಖೆಯ ಕುಸ್ತಿ ತರಬೇತಿ ಕೇಂದ್ರದಲ್ಲಿ ನಿಯೋಜಿತ ಕುಸ್ತಿ ತರಬೇತಿದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರ ತರಬೇತಿಯಲ್ಲಿ ಪಳಗಿದ ಕುಸ್ತಿಪಟುಗಳು 294 ರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸಿ 25 ಚಿನ್ನ, 30 ಬೆಳ್ಳಿ,40 ಕಂಚಿನ ಪದಕಗಳನ್ನು ಗೆದ್ದುದಲ್ಲದೆ ರಾಜ್ಯದ ಶ್ರೇಷ್ಠ 'ಮೈಸೂರು ದಸರಾ ಕುಸ್ತಿ ಪಂದ್ಯಾವಳಿ'ಗಳಲ್ಲಿ ದಸರಾ ಕೇಸರಿ, ದಸರಾ ಕಿಶೋರ, ದಸರಾ ಕಂಠೀರವ ಕರ್ನಾಟಕ ಸರ್ಕಾರದ ಅನುದಾನದಲ್ಲಿ ನಡೆಯುವ ಭಾರತೀಯ ಶೈಲಿಯ ಕುಸ್ತಿ ಕ್ರೀಡಾಕೂಟ 'ಕುಸ್ತಿ ಹಬ್ಬ' ಇದರಲ್ಲಿ ಇವರ ಶಿಷ್ಯ ಭದ್ರಾವತಿಯ ಕಿರಣ್ ಎರಡು ಬಾರಿ ಕರ್ನಾಟಕ ಕೇಸರಿ ಪ್ರಶಸ್ತಿ, ರಾಷ್ಟ್ರದ ವಿವಿಧ ಭಾಗಗಳಲ್ಲಿ ನಡೆಯುವ ಕುಸ್ತಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಇವರ ಶಿಷ್ಯರು ಇದರೊಂದಿಗೆ ಹಲವಾರು ಟೈಟಲ್ ಗಳನ್ನು ಮುಡಿಗೇರಿಸಿಕೊಂಡಿರುತ್ತಾರೆ ಉದಾ–ಹಂಪಿ ಕೇಸರಿ, ಹಂಪಿ ಕುಮಾರ, ತರಳಬಾಳು ಕೇಸರಿ, ತರಳಬಾಳು ಕಂಠೀರವ, ಕರ್ನಾಟಕ ಕುಮಾರ, ಕರ್ನಾಟಕ ಕೇಸರಿ ಇತ್ಯಾದಿ...

ಇದಲ್ಲದೆ ಹರಿಯಾಣ, ಮಹಾರಾಷ್ಟ್ರ ಕೊಲ್ಲಾಪುರ, ಸಾಂಗ್ಲಿ ಮತ್ತಿತರೆ ಸ್ಥಳಗಳಲ್ಲಿ ನಡೆಯುವ ರಾಷ್ಟ್ರಮಟ್ಟದ ಭಾರತೀಯ ಶೈಲಿ ಕುಸ್ತಿಗಳಲ್ಲಿ ಭಾಗವಹಿಸಿ ನಗದು ಬಹುಮಾನವನ್ನು ಪಾರಿತೋಷಕಗಳನ್ನು ಗಳಿಸಿರುತ್ತಾರೆ. ಅದರಲ್ಲಿ ಮುಖ್ಯವಾಗಿ ರಾಣೆಬೆನ್ನೂರಿನ ಕಾರ್ತಿಕ್ ಕಾಟೆ ಪ್ರಮುಖ ಪೈಲ್ವಾನ್.

ಇವರ ಶಿಷ್ಯರಲ್ಲಿ ಪ್ರಮುಖರಾದ ಕಾರ್ತಿಕ್ ಕಾಟೆ, ಆನಂದ, ಮಲ್ಲಪ್ಪ ಪಾಟೀಲ 'ಕರ್ನಾಟಕ ಕ್ರೀಡಾ ರತ್ನ'ಪ್ರಶಸ್ತಿ ಗಳಿಸಿರುತ್ತಾರೆ. ನಾಗರಾಜ ಜಿ,ರಫಿಕ ಹೂಳಿ, ಅರ್ಜುನ್ ಹಲಕುರ್ಕಿ ಏಕಲವ್ಯ ಪ್ರಶಸ್ತಿ ಪುರಸ್ಕೃತ ಶಿಷ್ಯರು.

ಇವರ ಈ ಸಾಧನೆಯ ಪರಿಣಾಮ ಸರ್ಕಾರ ಇವರಿಗೆ 2012 ಹಂಗೇರಿಯಲ್ಲಿ ನಡೆದ 'ಇಂಟರ್ನ್ಯಾಷನಲ್ ಕೋಚಿಂಗ್ ಕೋರ್ಸ್' ಗೆ ಕಳುಹಿಸಿ ಹೆಚ್ಚಿನ ತರಬೇತಿ ನೀಡಲಾಗಿದೆ.

ಸರ್ಕಾರಗಳು ಕುಸ್ತಿ ಅಕಾಡೆಮಿಗಳನ್ನು ತೆರೆಯಬೇಕು ಅವುಗಳಿಗೆ ಬೇಕಾಗುವಂತಹ ಸಲಕರಣೆ, ಅನುದಾನ ಹಾಗೂ ಪೂರ್ಣ ಪ್ರಮಾಣದ ತರಬೇತುದಾರರನ್ನು ನಿಯೋಜಿಸಿ ಪ್ರತಿ ತಾಲೂಕುಗಳಲ್ಲಿ ಕುಸ್ತಿ ತರಬೇತಿಗಾಗಿ ಅವಕಾಶ ಕಲ್ಪಿಸಿಕೊಡಬೇಕು.

ತರಬೇತುದಾರರ ಕೊರತೆಯಾದಲ್ಲಿ ಹಿರಿಯ ಕುಸ್ತಿಪಟುಗಳಿಗೆ ಗೌರವ ಸಂಭಾವನೆಯನ್ನು ನೀಡುವುದರ ಮೂಲಕ ಕುಸ್ತಿ ಬೆಳೆಯಲು ಅವಕಾಶ ಕಲ್ಪಿಸಿ ಕೊಡಬೇಕು ಎಂಬ ಮನದಾಳದ ಇಂಗಿತವನ್ನು ವ್ಯಕ್ತಪಡಿಸುತ್ತಾರೆ.

ಆಧುನಿಕ ಕುಸ್ತಿಗೆ ಅನುಕೂಲಕರವಾದಂತಹ ಇನ್ಫ್ರಾಸ್ಟ್ರಕ್ಚರನ್ನು ಎಲ್ಲಾ ತರಬೇತು ಶಾಲೆಗಳಿಗೆ ನೀಡಬೇಕು ಆಗ ಮಾತ್ರ ಹೆಚ್ಚಿನ ಪದಕಗಳನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಗೆಲ್ಲಲು ಸಾಧ್ಯವೆಂದೇಳುತ್ತಾರೆ.

ಇಂದಿನ ಯುವಕರು ಮಾರುಕಟ್ಟೆಯಲ್ಲಿ ಲಭ್ಯವಿರುವ ಅನಧಿಕೃತ, ಆರೋಗ್ಯಕ್ಕೆ ಮಾರಕವಾದಂತಹ ಆಹಾರ ಪದಾರ್ಥಗಳನ್ನು ಬಳಸಿ ತಮ್ಮ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದು ಇವರಿಗೆ ಸರಿಯಾದ ಮಾರ್ಗದರ್ಶನ ನೀಡಬೇಕು, ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ತಿಳಿಸುತ್ತಾರೆ.



ಡಾ.ಸುಧಾಕರ.ಜಿ.ಲಕ್ಕವಳ್ಳಿ.
ಕ್ರೀಡಾ ಲೇಖಕರು

ಯುವಕರು ಕೆಟ್ಟ ಚಟಗಳಿಗೆ ದಾಸರಾಗಿ ಮೊಬೈಲ್ ನೋಡುವುದರಲ್ಲಿ ತಮ್ಮ ಸಮಯವನ್ನು ಹಾಳು ಮಾಡಿಕೊಳ್ಳದೆ ದೇಹವನ್ನು ಸದೃಢವಾಗಿಟ್ಟುಕೊಳ್ಳಲು ಕನಿಷ್ಠ ಸಮಯದ ದೈಹಿಕ ತರಬೇತಿಯನ್ನು ದಿನನಿತ್ಯ ರೂಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳುತ್ತಾರೆ ಶಿವಾನಂದ್ ರವರು.

ತಮ್ಮ ಮಡದಿ ಲತಾ.ಎಸ್. ಇವರ ಸಹಕಾರ ತರಬೇತುದಾರನಾಗಿ ನನಗೆ ಸಾಕಷ್ಟು ಪ್ರೇರಣೆ ಹಾಗೂ ತಂದೆ ತಾಯಿಯ ಆಶೀರ್ವಾದ ಹಾಗೂ ಕುಟುಂಬದವರ ಪ್ರೋತ್ಸಾಹ ಇಷ್ಟೆಲ್ಲ ಸಾಧನೆಗೆ ಸಹಕಾರಿಯಾಗಿದೆ ಎಂದು ಹೇಳುತ್ತಾರೆ.

ಈಗಾಗಲೇ ಇವರಿಂದ ತರಬೇತಿ ಪಡೆದ 40 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸರ್ಕಾರದ ವಿವಿಧ ಇಲಾಖೆಗಳಲ್ಲಿ ನೌಕರಿಯನ್ನು ಪಡೆದಿರುತ್ತಾರೆ.





ಕುಸ್ತಿ ಕಲಿಯಲು ಬಂದ ಇವರ ಕೆಲವು ವಿದ್ಯಾರ್ಥಿಗಳನ್ನು ಅವರ ದೈಹಿಕ ಸಾಮರ್ಥ್ಯಕನುಗುಣವಾಗಿ ಬೇರೆ ಕ್ರೀಡೆಯಲ್ಲಿ ಭಾಗವಹಿಸಲು ಮಾರ್ಗದರ್ಶನ ಮಾಡಿದವರಲ್ಲಿ ಶಿಕಾರಿಪುರದ ಅವಿನಾಶ ನಾಯಕ ಜುಡೋ ಕ್ರೀಡೆಯಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ಪ್ರಶಸ್ತಿಗಳನ್ನು ಗಳಿಸಿ ಕ್ರೀಡಾಕೂಟ ದಡಿಯಲ್ಲಿ ಪೊಲೀಸ್ ಇಲಾಖೆಯ ಸಬ್ ಇನ್ಸ್ಪೆಕ್ಟರ್ ಹುದ್ದೆಯನ್ನು ಅಲಂಕರಿಸಿರುತ್ತಾರೆ ಹಾಗೂ ಕೆಲವು ವಿದ್ಯಾರ್ಥಿಗಳು ದೇಹದಾಢ್ಯ ಪುಟುಗಳಾಗಿರುವುದನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಇವರ ತಂದೆಯಿಂದ ಹಿಡಿದು ಇವರ ಸಹೋದರರು, ಇವರ ಮಕ್ಕಳಾದ ಶ್ರೇಯ ರಾಜ್ಯಮಟ್ಟದ ಕುಸ್ತಿ ಸ್ಪರ್ಧೆಯಲ್ಲಿ ಎರಡು ಬಾರಿ ಬೆಳ್ಳಿ ಪದಕ ಮಗ ಲಿಖಿತ್ 2023ರಲ್ಲಿ ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಚಿನ್ನದ ಪದಕವನ್ನು ಗಳಿಸಿರುತ್ತಾರೆ.

ಇವರ ಒಟ್ಟಾರೆ ಕ್ರೀಡಾ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳನ್ನು ಪರಿಶೀಲಿಸಿ ಕರ್ನಾಟಕ ಸರ್ಕಾರವು 2016 ರ *'ಜೀವಮಾನ ಸಾಧನಾ ಪ್ರಶಸ್ತಿ"* ಯನ್ನು ನೀಡಿ ಗೌರವಿಸಿದೆ ಕುಸ್ತಿ ಕ್ರೀಡೆಗೆ ಈ ಪ್ರಶಸ್ತಿ ಪಡೆದಿರುವ ಕರ್ನಾಟಕದ ಮೊದಲಿಗರಾಗಿದ್ದಾರೆ ಶಿವಾನಂದ್ ರವರು.

ತಮ್ಮ ಶಿಷ್ಯಂದರು ಈಗಾಗಲೇ ಕಾಮನ್ವೆಲ್ತ್ ಮತ್ತು ವರ್ಲ್ಡ್ ಚಾಂಪಿಯನ್ಶಿಪ್ಗಳಲ್ಲಿ ಪ್ರಶಸ್ತಿ ಗಳಿಸಿದ್ದು ಮುಂದಿನ ದಿನಗಳಲ್ಲಿ ಒಲಂಪಿಕ್ಸ್ ನಲ್ಲಿ ಪದಕವನ್ನು ಪಡೆಯಬೇಕೆಂಬ ಆಸೆಯನ್ನು ಹೊಂದಿದ್ದಾರೆ.

ಕ್ರೀಡಾ ಕೋಟಾದಡಿ 2023 ರಲ್ಲಿ ಇವರ ಶಿಷ್ಯರು 07 ಮಂದಿ ಪೊಲೀಸ್ ಇಲಾಖೆ ಹಾಗೂ ಇಬ್ಬರು ಇಂಡಿಯನ್ ಆರ್ಮಿಯಲ್ಲಿ ನೌಕರಿ ಪಡೆದಿರುತ್ತಾರೆ.

ಯಾವುದೇ ಕ್ರೀಡೆಯಾಗಲಿ ಸಾಧನೆಯನ್ನು ಮಾಡಬೇಕಾದರೆ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ತರಬೇತಿ ಹಾಗೂ ಸಮತೋಲಿತ ಆಹಾರದ ಜ್ಞಾನ ನೀಡುವುದು ಬಹಳ ಮುಖ್ಯ.

ಯಾರೇ ಆಗಲಿ ಯಾವುದೇ ಕ್ರೀಡೆಯಾಗಲಿ ವೈಯಕ್ತಿಕವಾಗಿ ಶಿಸ್ತು, ಸಾಧಿಸುವ ಛಲ, ಆ ಕ್ರೀಡೆಗೆ ಬೇಕಾದ ಶ್ರಮ ಮತ್ತು ನಿರಂತರ ತರಬೇತಿ ಮಾರ್ಗದರ್ಶನ ಪಡೆದವರು ಮಾತ್ರ ಸಾಧಿಸಲು ಸಾಧ್ಯ ಎನ್ನುತ್ತಾರೆ ತರಬೇತಿದಾರರಾದ ಶಿವಾನಂದರವರು.

ಇವರಿಂದ ಕುಸ್ತಿ ಕಲಿತು ಹೆಸರು ಗಳಿಸಿದ ಇವರ ವಿದ್ಯಾರ್ಥಿಗಳಲ್ಲಿ ಉಪೇಂದ್ರ ಕಾರ್ತಿಕ್ ಮೈಸೂರು (ನಮ್ಮ ಮೆಟ್ರೋ ಉದ್ಯೋಗಿ), ಕಾಡೇಶ ನ್ಯಾಮೇಗೌಡ ಬಾಗಲಕೋಟೆ, ರವೀಂದ್ರ ಬನಟ್ಟಿ, ಬಾಹುಬಲಿ ಶಿರಟ್ಟಿ ಇವರುಗಳು ಕುಸ್ತಿಯಲ್ಲಿ ಡಿಪ್ಲೋಮಾ ಪದವಿ ಪಡೆದು ಕುಸ್ತಿ ಏಳಿಗೆಗಾಗಿ ಶ್ರಮಿಸುತ್ತಿದ್ದಾರೆ.

ಇವರಿಂದ ತರಬೇತಿ ಪಡೆದ, ಮುಂದೆ ತರಬೇತಿ ಪಡೆಯಲಿರುವ ಕುಸ್ತಿ ಪಟುಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿ ದೇಶದ ಕೀರ್ತಿ ಹೆಚ್ಚಿಸಲೆಂದು ನಾವೆಲ್ಲರೂ ಹಾರೈಸೋಣ.

## ಜ.1 ರಿಂದ ಆರೋಗ್ಯ ರಕ್ಷಣೆ ಯೋಜನೆ ನೊಂದಣಿ ಪ್ರಾರಂಭ

**ಹಂಪಿ ಟೈಮ್ಸ್ ರಾಯಚುರು**

ಯಶಸ್ವಿನಿ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಾಗಿದ್ದು, ಈ ಯೋಜನೆಯಡಿ 2023–24ನೇ ಸಾಲಿಗೆ ನೋಂದಾಯಿಸಲು ಸರ್ಕಾರವು ಆದೇಶ ಹೊರಡಿಸಿದ್ದು, ಅದರನ್ವಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ, ಪಿಕಾರ್ಡ ಬ್ಯಾಂಕಗಳ, ಹಾಲು ಉತ್ಪಾದಕರ ಸಹಕಾರ ಸಂಘಗಳ, ಟಿ.ಎ.ಪಿ.ಸಿ.ಎಮ್.ಎಸ್‌ಗಳ ಹಾಗೂ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಡಿ ಅಥವಾ ಕರ್ನಾಟಕ ಸೌಹಾರ್ದ ಸಹಕಾರಿಗಳ ಕಾಯ್ದೆ 1997ರಡಿ ಅಥವಾ ಬಹು ರಾಜ್ಯ ಸಹಕಾರಿ ಸಂಘಗಳ ಕಾಯ್ದೆ 2002ರಡಿ ನೋಂದಾಯಿಸಿ, ಕಾರ್ಯನಿರ್ವಹಿಸುತ್ತಿರುವ ಯಾವುದೇ ಸಹಕಾರ ಸಂಘಗಳ ಸದಸ್ಯರು ಮತ್ತು ಗ್ರಾಮೀಣ ಸಹಕಾರ ಸಂಘಗಳ/ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ವತಿಯಿಂದ ಸಂಘಟಿಸಲ್ಪಟ್ಟಿರುವ ಸ್ವಸಹಾಯ ಗುಂಪುಗಳ ಸದಸ್ಯರುಗಳು ಗರಿಷ್ಟ ನಾಲ್ಕು ಸದಸ್ಯರ ಕುಟುಂಬಕ್ಕೆ ವಾರ್ಷಿಕ ವಂತಿಗೆ ರೂ.500/–ಗಳು ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ.20 ರಷ್ಟು ಹೆಚ್ಚುವರಿಯಾಗಿ ಅಂದರೆ ಪ್ರತಿ ಹೆಚ್ಚುವರಿ ಸದಸ್ಯರಿಗೆ ರೂ.100/–ಗಳನ್ನು ಪಾವತಿಸಿ ನೋಂದಾಯಿಸಬಹುದು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯಧನ ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸುತ್ತದೆ ಎಂದು ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ತಿಳಿಸಿದ್ದಾರೆ.

ನಗರ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆಯಡಿ ನೋಂದಾಯಿಸಲು ಈ ಯೋಜನೆಯಡಿ ಗರಿಷ್ಟ ನಾಲ್ಕು ಸದಸ್ಯರ ಕುಟುಂಬಕ್ಕೆ ವಾರ್ಷಿಕ ವಂತಿಗೆ ರೂ.1000/–ರಂತೆ ವಂತಿಗೆ ಮತ್ತು ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ.20 ರಷ್ಟು ಹೆಚ್ಚುವರಿಯಾಗಿ ಅಂದರೆ ಪ್ರತಿ ಹೆಚ್ಚುವರಿ ಸದಸ್ಯರಿಗೆ ರೂ.200/–ಗಳನ್ನು ಪಾವತಿಸಿ ನೋಂದಾಯಿಸಬಹುದು.

ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಸಹಕಾರ ಸಂಘಗಳಲ್ಲಿ ಸದಸ್ಯರಾಗಿ ಯಶಸ್ವಿನಿ ಯೋಜನೆಯಡಿ ನೋಂದಾಯಿಸುವ ದಿನಾಂಕಕ್ಕೆ 3 ತಿಂಗಳು ಕಳೆದಿರಬೇಕು. ಹಾಗೂ ವಯೋಮಿತಿಯ ನಿರ್ಬಂಧವಿರುವುದಿಲ್ಲ. ಈ ಯೋಜನೆಯಡಿ ಯಶಸ್ವಿನಿ ಸದಸ್ಯರುಗಳನ್ನು ನೋಂದಾಯಿಸುವ ನೋಂದಣಿ ಪ್ರಕ್ರಿಯೆಯನ್ನು ಜ.01 ರಿಂದ ಪ್ರಾರಂಭವಾಗಿರುವುದ ರಿಂದ ಈ ಯೋಜನೆಯಡಿ ಸರಿ ಸುಮಾರು 1650 ಖಾಯಿಲೆಗಳಿಗೆ ಚಿಕಿತ್ಸೆಗಳು ಮತ್ತು 478 ಐ.ಸಿ.ಯು ಚಿಕಿತ್ಸೆಗಳು ಒಟ್ಟು 2128 ಚಿಕಿತ್ಸೆಗಳನ್ನು ಯಶಸ್ವಿನಿ ಯೋಜನೆಯಡಿ ಅಳವಡಿಸಿಕೊಂಡಿರುವುದರಿಂದ ಈ ಯೋಜನೆಯ ಫಲಾನುಭವಿಗಳ ಕುಟುಂಬಕ್ಕೆ ವಾರ್ಷಿಕ ವೈದ್ಯಕೀಯ ಚಿಕಿತ್ಸಾ ವೆಚ್ಚದ ಗರಿಷ್ಠ ಮಿತಿ ರೂ.5.00 ಲಕ್ಷಕ್ಕೆ ನಿಗಧಿಪಡಿಸಿದೆ. ರಾಜ್ಯದ ಯಾವುದೇ ಯಶಸ್ವಿನಿ ನೆಟ್‌ವರ್ಕ ಅಸ್ಪತ್ರೆಯಲ್ಲಿ ನಗದು ರಹಿತ ಚಿಕಿತ್ಸೆ ಪಡೆಯಲು ಅವಕಾಶವಿರುತ್ತದೆ. ಈ ಯೋಜನೆಯಡಿಯಲ್ಲಿ ನೋಂದಾಯಿಸಿ ಪ್ರಯೋಜನೆ ಪಡೆದುಕೊಳ್ಳಲು ಕೋರಲಾಗಿದೆ. 2023–24ನೇ ಯಶಸ್ವಿನಿ ಯೋಜನೆಯ ಅವದಿ ಜ.01 ರಿಂದ ಫೆ.28ರವರೆಗೆ ಜಾರಿಯಲ್ಲಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸ್ಥಳೀಯ ಸಹಕಾರ ಸಂಘಗಳು ಹಾಗೂ ಸಹಕಾರ ಇಲಾಖಾ ಕಛೇರಿಗಳನ್ನು ಖುದ್ದಾಗಿ ಹಾಗೂ ದೂರವಾಣಿ ಸಂಖ್ಯೆ ಮೂಲಕ ಸಹಕಾರ ಸಂಘಗಳ ಉಪ ನಿಬಂಧಕರ ಕಛೇರಿ ರಾಯಚೂರು –08532–221665, ಸಹಕಾರ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ ರಾಯಚೂರು –08532–226268, 9902165419, ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಸಿಂಧನೂರು –08535–230550, 9739167850, ಸಹಕಾರ ಅಭಿವೃದ್ಧಿ ಅಧಿಕಾರಿ ಮಾನವಿ – 9901384411, ಸಹಕಾರ ಅಭಿವೃದ್ಧಿ ಅಧಿಕಾರಿ ಲಿಂಗಸೂಗೂರು–9972551962, ಸಹಕಾರ ವಿಸ್ತೀರ್ಣಾಧಿಕಾರಿ ರಾಯಚೂರು–9686647802, ಸಹಕಾರ ವಿಸ್ತೀರ್ಣಾದಿ, ಕಾರಿ ದೇವದುರ್ಗಾ–8904641729 , ವಿಸ್ತೀರ್ಣಾಧಿಕಾರಿ ಸಿಂಧನೂರು 9880744147 ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಸಹಕಾರ ಸಂಘಗಳ ಉಪ ನಿಬಂಧಕರು ತಿಳಿಸಿದ್ದಾರೆ.

## ಜ.09ರಿಂದ ಸಾರ್ವಜನಿಕರ ಕುಂದುಕೊರತೆಗಳ ಸ್ವೀಕಾರ

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಅವರ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕರಾದ ಸಂಗಮೇಶ್, ಮಹಮ್ಮದ್ ರಫಿ ನೇತೃತ್ವದಲ್ಲಿ ಜನವರಿ ತಿಂಗಳಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರು, ಕಂಪ್ಲಿ ಮತ್ತು ಸಿರುಗುಪ್ಪ ತಾಲೂಕು ಕೇಂದ್ರಗಳಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆ ಜ.09ರಿಂದ 11 ರವರೆಗೆ ನಡೆಸಲಾಗುತ್ತಿದೆ.

ಜ.09 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 02 ರವರೆಗೆ ಸಂಡೂರು ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ, ಜ.10 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 02 ರವರೆಗೆ ಸಿರುಗುಪ್ಪ ಸಿಡಿಪಿಓ ಕಚೇರಿ ಸಭಾಂಗಣ ಮತ್ತು ಜ.11 ರಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 02 ರವರೆಗೆ ಕಂಪ್ಲಿ ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ಜನ ಸಂಪರ್ಕ ಸಭೆ ನಡೆಯಲಿದೆ. ಕುಂದು ಕೊರತೆಗಳಿರುವ ಸಾರ್ವಜನಿಕರು ನಿಗದಿತ ದಿನ ಮತ್ತು ಸ್ಥಳದಲ್ಲಿ ತಮ್ಮ ದೂರು ಅರ್ಜಿಗಳನ್ನು ನೀಡಬಹುದು. ಕುಂದುಕೊರತೆಗಳ ಅಹವಾಲುಗಳ ಅರ್ಜಿಗಳನ್ನು ಸ್ವೀಕರಿಸಿ, ವಿಚಾರಿಸಲಾಗುತ್ತದೆ. ಕರ್ನಾಟಕ ಲೋಕಾಯುಕ್ತ ಬೆಂಗಳೂರು ವಿಭಾಗ ಲೋಕಾಯುಕ್ತರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ:01 ಮತ್ತು 02 ಗಳನ್ನು ನೀಡಲಾಗುವುದು ಎಂದು ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು ತಿಳಿಸಿದ್ದಾರೆ.

14 ಭಾಷೆ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com




ಮೈಕ್ರೋ ನ್ಯೂಸ್

## ಗಿಗ್ ಕಾರ್ಮಿಕರ ವಿಮಾ ಯೋಜನೆ: ನೋಂದಾಯಿಸಲು ಸೂಚನೆ

**ಹಂಪಿ ಟೈಮ್ಸ್ ಹೊಸಪೇಟೆ**
ಗಿಗ್ ಕಾರ್ಮಿಕರ ವಿಮಾ ಯೋಜನೆಯಡಿ ಅರ್ಹ ಕಾರ್ಮಿಕರು ನೋಂದಾಯಿಸಿಕೊಳ್ಳುವಂತೆಜಿಲ್ಲಾ ಕಾರ್ಮಿಕ ಅಧಿಕಾರಿಸೂರಪ್ಪ ಡಂಬಾಳ್ ತಿಳಿಸಿದ್ದಾರೆ.

ಇ-ಕಾಮರ್ಸ್ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗಿಗ್ ಕಾರ್ಮಿಕರಿಗೆ ಜೀವ ವಿಮೆ ಹಾಗೂ ಅಪಘಾತಗೊಂಡ ಕಾರ್ಮಿಕರಿಗೆ ಅಪಘಾತ ಪರಿಹಾರ ಒದಗಿಸುವ ಸಂಬಂಧ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು'ಕರ್ನಾಟಕ ರಾಜ್ಯಗಿಗ್ ಕಾರ್ಮಿಕರವಿಮಾಯೋಜನೆ'ಯನ್ನು ಜಾರಿಗೆ ತಂದಿದ್ದು, ಎಲ್ಲಾ ಅರ್ಹ ಗಿಗ್ ಕಾರ್ಮಿಕರಾದ ಸ್ವಿಗ್ಗಿ, ಜೊಮಾಟೋಗಳಂತಹ ಸಂಸ್ಥೆಗಳಲ್ಲಿ ಫುಡ್‌ಡೆಲಿವರಿ ಮಾಡುವ ಹಾಗೂ ಇ-ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಫ್‌ಕಾರ್ಟ್, ಪೋರ್ಟರ್, ಫಾರ್ಮಸಿ, ಬ್ಲಿಂಕಿಟ್, ಜೆಪ್ಟೋ, ಬಿಗ್ ಬಾಸ್ಕೆಟ್, ಡಾಮಿನೋಜ್ ಮುಂತಾದ ಸಂಸ್ಥೆಗಳಲ್ಲಿ ಡೆಲಿವರಿ ವೃತ್ತಿಯಲ್ಲಿ ತೊಡಗಿಸಿಕೊಂಡ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರು ಸೇವಾಸಿಂಧು ಪೋರ್ಟಲ್ https://sevasindhuservices.karnataka.gov.in ನಲ್ಲಿ ನೋಂದಾಯಿಸಿಕೊಳ್ಳಬೇಕು.

ಅರ್ಹ ಗಿಗ್ ಕಾರ್ಮಿಕರು18 ರಿಂದ 60 ವರ್ಷದೊಳಗಿರಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾರ್ಮಿಕ ಅಧಿಕಾರಿ, ಕಚೇರಿ/ತಾಲ್ಲೂಕು ಮಟ್ಟದ ಕಾರ್ಮಿಕ ನಿರೀಕ್ಷಕರುಗಳಕಚೇರಿ, ಕಾರ್ಮಿಕ ಸಹಾಯವಾಣಿ 155214 ಸಂಪರ್ಕಿಸಬಹುದು.

# ಉದ್ಯಮ ವಿಸ್ತರಣೆಯಿಂದ ಉದ್ಯೋಗ ಹೆಚ್ಚಳ

### ಅಪರ ಜಿಲ್ಲಾಧಿಕಾರಿ ಜಿ. ಅನುರಾಧ ಪರಿಸರ ಸಂರಕ್ಷಣೆಗೆ ಸೂಚನೆ | ಲಕ್ಷ್ಮಿಪ್ರಿಯಾ ಸ್ಟೀಲ್ ಪ್ರೈವೇಟ್ ಲಿಮಿಟೆಡ್ ಕಂಪನಿ ಬಗ್ಗೆ ಸಾರ್ವಜನಿಕರ ಆಲಿಕೆ ಸಭೆ

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**
ಸಮೀಪದ ಡಣಾಯಕನಕೆರೆ ಮತ್ತು ಗೊಲ್ಲರಹಳ್ಳಿ ಗ್ರಾಮದ ಬಳಿ ಲಕ್ಷ್ಮಿಪ್ರಿಯಾ ಸ್ಟೀಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಉದ್ಯಮ ವಿಸ್ತರಣೆಗಾಗಿ ಬುಧವಾರ ಕರ್ನಾಟಕ ರಾಜ್ಯ ಮಾಲೀನ್ಯ ನಿಯಂತ್ರಣ ಮಂಡಳಿಯವರು ಕರೆಯಲಾಗಿದ್ದ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಯಿತು.

ಆರಂಭದಲ್ಲಿ ಕಾರ್ಖಾನೆಯ ಅಧಿಕಾರಿಗಳು ಸಾರ್ವಜನಿಕರಿಗೆ ಮಾಹಿತಿ ನೀಡಿ ಮಾತನಾಡಿ, ಐರನ್ ಓರ್ ಪ್ರತ್ಯಕೀಕರಣ ಘಟಕ, ಕಲ್ಲಿದ್ದಲು ಆಧಾರಿತ ಡಿಆರ್ ಐ ಘಟಕ (ಸ್ಪಾಂಜ್ ಐರನ್) ಉತ್ಪಾದನಾ ಸಾಮರ್ಥ್ಯಲನ್ನು 100ಟಿಪಿಡಿ ಯಿಂದ 195 ಟಿಪಿಡಿವರೆಗೆ ವಿಸ್ತರಿರಲು ಹಾಗೂ ಹೆಚ್ಚುವರಿ ಸೌಲಭ್ಯಗಳಾದ 5 ಎಂಡಬ್ಲೂ ಸಾಮರ್ಥ್ಯದ ತ್ಯಾಜ್ಯಶಾಖಾ ಚೇತರಿಕೆ ಆಧಾರಿತ ವಿದ್ಯುತ್ ಸ್ಥಾವರ ವಿಸ್ತರಣೆ, ಕಬ್ಬಿಣದ ಅದಿರು ಬೆನಿಫಿಶಿಯೇಷನ್ ಪ್ಲಾಂಟ್ ಘಟಕಗಳನ್ನು ಅಸ್ತಿತ್ವದಲ್ಲಿರುವ ಒಟ್ಟು 28.56 ಎಕೆರೆ (11.55 ಹೆಕ್ಟರ್ ) ಪ್ರದೇಶದಲ್ಲಿ ಯೋಜನೆಯನ್ನು ಸ್ಥಾಪಿಸುವ ಸಂಬಂಧ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಡಣಾಯಕನಕೆರೆ ಮತ್ತು ಗೊಲ್ಲರಹಳ್ಳಿ ಗ್ರಾಮಗಳ ಸಾರ್ವಜನಿಕರ ಸಭೆಯಲ್ಲಿ ಮಂಡಿಸಿದರು.

ಕಾರ್ಖಾನೆಯಲ್ಲಿ ಈಗಿರುವ ಕಾರ್ಮಿಕರೊಂದಿಗೆ ಇನ್ನೂ ಹೆಚ್ಚಿನ ಜನರಿಗೆ ಉದ್ಯೋಗ ಲಭಿಸಲಿದೆ. ಅನೇಕ ಜನರಿಗೆ ಖಾಯಂ ಉದ್ಯೋಗ ಲಭಿಸುವ ಸಾಧ್ಯತೆಗಳಿವೆ. ಕಾರ್ಖಾನೆಯ ಸುತ್ತಮುತ್ತಲಿನ ಪ್ರದೇಶಗಳ ಗ್ರಾಮೀಣ ಪ್ರದೇಶದಲ್ಲಿ ಯುವಕರಿಗೆ ಉದ್ಯೋಗ ದೊರೆಯಲಿದೆ. ಇದರಿಂದ ಗ್ರಾಮೀಣ ಜನರ ಆರ್ಥಿಕಾಭಿವೃದ್ಧಿ ಸಹ ಹೆಚ್ಚಿಸಲಿದೆ. ಕಂಪನಿಯ ಯೋಜನೆಯ ವಿಸ್ತರಣೆ ಸಲುವಾಗಿ ಕೈಗೊಂಡ ಉದ್ದೇಶ ಹಾಗೂ ಉದ್ಯೋಗವಕಾಶವು ಈ ಯೋಜನೆಯ ವಿಸ್ತರಣೆಯಿಂದ ದೊರೆಯಲಿದೆ ಎಂದು ಕಂಪನಿಯ ಅಧಿಕಾರಿಗಳು ಸಾರ್ವಜನಿಕರಿಗೆ ವಿವರಿಸಿದರು.




ಕರ್ನಾಟಕ ರಾಜ್ಯ ಮಾಲೀನ್ಯ ನಿಯಂತ್ರಣ ಮಂಡಳಿಯವರು ಕರೆದಿದ್ದ ಪರಿಸರ ಸಾರ್ವಜನಿಕ ಆಲಿಕೆ ಸಭೆಯಲ್ಲಿ ಕೆಲ ಸ್ಥಳೀಯ ರೈತರು, ಸಂಘ ಸಂಸ್ಥೆಯ ಪದಾ ಧಿಕಾರಿಗಳು, ಸ್ಥಳೀಯ ಮುಖಂಡರು ಬಹುತೇಕ ಜನರು ಕಾರ್ಖಾನೆಯ ಪರವಾಗಿ ಮಾತನಾಡಿದರು. ಲಕ್ಷ್ಮಿಪ್ರಿಯಾ ಸ್ಟೀಲ್ ಪ್ರೈವೇಟ್ ಲಿಮಿಟೆಡ್‌ನಿಂದ ಸ್ಥಳೀಯ ಗ್ರಾಮಸ್ಥರಿಗೆ ಸಾಕಷ್ಟು ನೆರವು ಮತ್ತು ಉದ್ಯೋಗಾವಕಾಶವನ್ನು ಕಲ್ಪಿಸಲಾಗಿದೆ. ಶಿಕ್ಷಣ, ತರಬೇತಿ ಮತ್ತು ಜ್ಞಾನ ಮತ್ತು ಕೌಶಲ್ಯಗಳನ್ನು ಅಭಿವೃದ್ಧಿ ಪಡಿಸಲಾಗಿದೆ. ವೈದ್ಯಕೀಯ ತಪಾಸಣೆ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸಾರ್ವಜನಿಕ ಕಲ್ಯಾಣ ಚಟುವಟಿಕೆಗಳು, ವಿದ್ಯಾರ್ಥಿ ವೇತನವನ್ನು ಒದಗಿಸುವುದು. ಶಾಲೆಗಳನ್ನು ಅಭಿವೃದ್ಧಿ ಪಡಿಸುವುದು. ಅಗತ್ಯವಿರುವ ಜನರಿಗೆ ಕುಡಿಯುವ ನೀರು ಸೇರಿದಂತೆ ಇತರೆ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಹೋಲಿಗೆ ತರಬೇತಿ, ಕಂಪ್ಯೂಟರ್ ತರಬೇತಿಯನ್ನು ಸ್ಥಳೀಯರಿಗೆ ನಡೆಸಿದ್ದಾರೆ. ಅಂಗವಿಕಲರಿಗೆ ನೆರವು ನೀಡಿದ್ದಾರೆ. ಕೆಲ ಗ್ರಾಮಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿದ್ದಾರೆ ಇಂತಹ ಉತ್ತಮ ಕೆಲಸ ಮಾಡಿದ ಕಾರ್ಖಾನೆ ವಿಸ್ತರಣೆಗೆ ಅವಕಾಶ ಕಲ್ಪಿಸಿಕೊಡಬೇಕು ಎಂದು ಸಭೆಯಲ್ಲಿ ಬಹುತೇಕ ಜನರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ಕೊನೆಯಲ್ಲಿ ಅಪರ ಜಿಲ್ಲಾಧಿಕಾರಿ ಜಿ. ಅನುರಾಧ ಮಾತನಾಡಿ, ಕರ್ನಾಟಕ ರಾಜ್ಯ ಮಾಲೀನ್ಯ ನಿಯಂತ್ರಣ ಮಂಡಳಿಯವರು ಕೆರೆದಿದ್ದ ಈ ಸಭೆಯಲ್ಲಿ ನೂರಾರು ಜನರು ಭಾಗವಹಿಸಿದ್ದರು. ಇವರಲ್ಲಿ ಸುಮಾರು 150ಕ್ಕೂ ಹೆಚ್ಚು ಜನರು ಅರ್ಜಿ ಸಲ್ಲಿಸಿದ್ದಾರೆ. ಎಲ್ಲಾ ಅರ್ಜಿಗಳನ್ನು ಪರಿಶೀಲನೆ ನಡೆಸಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕಳುಹಿಸಿಕೊಡುತ್ತೇವೆ. ಆದರೂ ಲಕ್ಷ್ಮಿಪ್ರಿಯಾ ಸ್ಟೀಲ್ ಪ್ರೈವೇಟ್ ಲಿಮಿಟೆಡ್‌ನವರು ಕಾರ್ಖಾನೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಗಿಡಮರಗಳು ಹೆಚ್ಚಾಗಿ ಕಂಡು ಬರುತ್ತಿಲ್ಲ. ಪರಿಸರ ಸಂರಕ್ಷಣೆಗಾಗಿ ಕಾರ್ಖಾನೆಯವರು ಹೆಚ್ಚಾಗಿ ಗಿಡಮರಳನ್ನು ಬೆಳೆಸಲು ಮುಂದಾಗಬೇಕು ಎಂದು ಅವರು ಹೇಳಿದರು.

ವಿಜಯನಗರ ಜಿಲ್ಲಾ ಹಿರಿಯ ಪರಿಸರ ಅಧಿಕಾರಿ ಬಿ. ಎಸ್. ಮುರಳಿಧರ, ವಿಜಯನಗರ ಪರಿಸರ ಹಾಗೂ ಮಾಲಿನ್ಯ ನಿಯಂತ್ರಣಾಧಿಕಾರಿ ಎಸ್. ಸಿ. ಸುರೇಶ್ ಸೇರಿದಂತೆ ಸ್ಥಳೀಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಸ್ಥಳೀಯ ಮುಖಂಡರು, ರೈತ ಸಂಘದ ಪದಾಧಿಕಾರಿಗಳು, ಕಾರ್ಖಾನೆಯ ಅಧಿಕಾರಿಗಳು, ಸ್ಥಳೀಯ ಜನಪ್ರತಿನಿಧಿನಗಳು ಸಭೆಯಲ್ಲಿ ಭಾಗವಹಿಸಿದ್ದರು.

> ಹೊಸಪೇಟೆ ಗ್ಲೋಬಲ್ ಎನ್ವಿರಾನ್ಮೆಂಟ್ & ಮೈನಿಂಗ್ ಸರ್ವೀಸಸ್ ನ ಎಸ್. ಕಾಮೇಶ್ವರ ರಾವ್ ಅವರು ಸಂಸ್ಥೆಯ ಉದ್ದೇಶಿತ ಯೋಜನೆ ಕುರಿತು ವಿವರಿಸುತ್ತಾ ಮಾತನಾಡಿ, ಉದ್ಯಮ ವಿಸ್ತರಣೆಯಿಂದಾಗಿ ಸ್ಥಳೀಯ ಉದ್ಯೋಗವಕಾಶಗಳು ಹೆಚ್ಚಲಿವೆ. ಕಾರ್ಖಾನೆಯ ಸುತ್ತಮುತ್ತಲಿನಲ್ಲಿ ಸಿಎಸ್‌ಆರ್ ಚಟುವಟಿಕೆಗಳಡಿ ವೈದ್ಯಕೀಯ ತಪಾಸಣೆ, ಕುಡಿಯುವ ನೀರು ಪೂರೈಕೆ, ಶಿಕ್ಷಣ, ಕೌಶಲ್ಯ ತರಬೇತಿ, ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ, ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ, ರಸ್ತೆ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ. ಗ್ರಾಪಂ ಸದಸ್ಯರ ಸಹಕಾರದೊಂದಿಗೆ ಶಾಲಾ ನಿರ್ವಹಣೆಗೆ ಅಗತ್ಯ ನೆರವು ದೊರೆಯಲಿದೆ ಎಂದರು.

# ಶ್ರೀ ಗವಿಸಿದ್ಧೇಶ್ವರ ಜಾತ್ರಾ ಮಹೋತ್ಸವ

### ಜ.23 ರಿಂದ ಜ. 29ರವರೆಗೆ ಶ್ರೀಗವಿಮಠದಿಂದ ವಿವಿಧ ಕಾರ್ಯಕ್ರಮಗಳು | ಪೂರ್ವಭಾವಿ ಸಿದ್ಧತಾ ಸಭೆ

**ಹಂಪಿ ಟೈಮ್ಸ್ ಕೊಪ್ಪಳ**
ನಾಡ ಪ್ರಸಿದ್ಧ ಶ್ರೀಗವಿಸಿದ್ದೇಶ್ವರ ಜಾತ್ರಾ ಮಹೋತ್ಸವ ಹಿನ್ನೆಲೆಯಲ್ಲಿ ಮೊದಲ ಹಂತದ ಪೂರ್ವಭಾವಿ ಸಿದ್ಧತಾ ಸಭೆಯು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್ ಅಧ್ಯಕ್ಷತೆಯಲ್ಲಿ ಬುಧವಾರ ನಡೆಯಿತು.

ಶಾಸಕ ರಾಘವೇಂದ್ರ ಹಿಟ್ನಾಳ ಮಾತನಾಡಿ, ಪ್ರಸಿದ್ಧ ಶ್ರೀಗವಿಸಿದ್ದೇಶ್ವರ ಜಾತ್ರೋತ್ಸವ ಹಿನ್ನೆಲೆಯಲ್ಲಿ ಜನವರಿ 13ರಿಂದಲೇ ಗವಿಶ್ರೀ ಮಠಕ್ಕೆ ಬಂದು ಹೋಗುವವರ ಸಂಖ್ಯೆ ಹೆಚ್ಚಾಗಲಿದೆ. ರಥೋತ್ಸವ ದಿನದಿಂದ ಬಹಳಷ್ಟು ಸಂಖ್ಯೆಯಲ್ಲಿ ಭಕ್ತರು ಶ್ರೀಮಠದ ಆವರಣದಲ್ಲಿಯೇ ವಾಸ್ತವ್ಯ ಮಾಡುತ್ತಾರೆ. ಈ ಭಾರಿ ಬಸ್ಸಿನ ಸೌಕರ್ಯ ಇರುವುದರಿಂದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಸಾಧ್ಯತೆ ಇದೆ. ಶ್ರೀಮಠಕ್ಕೆ ಬರುವ ಭಕ್ತಾದಿಗಳಿಗೆ ಅನುಕೂಲವಾಗುವಂತೆ ವಿವಿಧೆಡೆ ಅಚ್ಚುಕಟ್ಟಾಗಿ ಕುಡಿಯುವ ನೀರು, ಪಾರ್ಕಿಂಗ್ ವ್ಯವಸ್ಥೆ ಮಾಡಬೇಕು. ಜಾತ್ರೋತ್ಸವ ದಿನದಂದು ಶ್ರೀಮಠದ ರಥೋತ್ಸವಕ್ಕೆ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಸೇರುವುದರಿಂದ ಆ ಸಂದರ್ಭದಲ್ಲಿ ಯಾವುದೇ ರೀತಿಯ ಅವಘಡಗಳು ಸಂಭವಿಸದಂತೆ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಮಠದ ಆವರಣದ ನಾಲ್ಕೂ ದಿಕ್ಕಿನಲ್ಲಿ ಅಗ್ನಿಶಾಮಕ ವಾಹನಗಳು ಇರಬೇಕು. ಜ. 10 ರಿಂದ ಫೆ. 10ರವರೆಗೆ ಆಯಾ ಇಲಾಖೆಗಳಿಗೆ ವಹಿಸಿದ ಎಲ್ಲಾ ಕಾರ್ಯಗಳು ಅಚ್ಚುಕಟ್ಟಾಗಿ ನಡೆಯುವಂತಾಗಬೇಕು. ಜಾತ್ರೋತ್ಸವಕ್ಕೆ ಕೆಲವೇ ದಿನಗಳು ಬಾಕಿ ಇದ್ದು ಅಧಿಕಾರಿಗಳು ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಸಿದ್ಧತಾ ಕಾರ್ಯಗಳನ್ನು ಯುದ್ಧೋಪಾದಿಯಲ್ಲಿ ನಡೆಸಬೇಕು ಎಂದು ಸೂಚಿಸಿದರು.

ಶ್ರೀ ಗವಿಸಿದ್ದೇಶ್ವರ ಜಾತ್ರೆಗೆ ಲಕ್ಷಾಂತರ ಭಕ್ತರು ಆಗಮಿಸುವುದರಿಂದ ವಿವಿಧೆಡೆ ಸಿಸಿ ಕ್ಯಾಮರಾ ಅಳವಡಿಸಬೇಕು. ಅಗತ್ಯವಿದ್ದಲ್ಲಿ ಜಾತ್ರಾ ಸ್ಥಳದಲ್ಲಿ ತಾತ್ಕಾಲಿಕ ಪೊಲೀಸ್ ಠಾಣೆ ನಿರ್ಮಿಸಬೇಕು. ವೃದ್ಧರು, ಮಹಿಳೆಯರು, ಮಕ್ಕಳು ಮತ್ತು ವಿಕಲಚೇತನರು ಪಾರ್ಕಿಂಗ್ ಸ್ಥಳದಿಂದ ಶ್ರೀಮಠಕ್ಕೆ ಆಗಮಿಸಲು ಅನುಕೂಲವಾಗುವಂತೆ, ಪರವಾನಿಗೆ ಹೊಂದಿದ ಸುಸಜ್ಜಿತ ಆಟೋಗಳನ್ನು ಮಾತ್ರ ನಿರ್ಬಂಧಿತ ಸ್ಥಳಕ್ಕೆ ಪ್ರಯಾಣಿಸಲು ಅವಕಾಶ ಕಲ್ಪಿಸಲು ವ್ಯವಸ್ಥೆ ಮಾಡಬೇಕು ಎಂದು ಇದೆ ವೇಳೆ ಶಾಸಕರು ಜಿಲ್ಲಾ ಪೊಲೀಸ್ ಇಲಾಖೆಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಮಾತನಾಡಿ, ರಥೋತ್ಸವ ದಿನದಂದು ಲಕ್ಷಾಂತರ ಭಕ್ತರು ಮತ್ತು ಇನ್ನುಳಿದ ದಿನಗಳಲ್ಲಿ ಸಹ ಪ್ರತಿ ದಿನ 3 ರಿಂದ 4 ಲಕ್ಷ ಭಕ್ತರು ಶ್ರೀಮಠಕ್ಕೆ ಆಗಮಿಸುತ್ತಾರೆ. ಜನವರಿ 23 ರಿಂದ ಜನವರಿ 29ರವರೆಗೆ ಗವಿಸಿದ್ದೇಶ್ವರ ಸಂಸ್ಥಾನ ಶ್ರೀಗವಿಮಠದಿಂದ ವಿವಿಧ ಕಾರ್ಯಕ್ರಮಗಳು ಇರುತ್ತವೆ. ಜಾತ್ರೋತ್ಸವ ಹಿನ್ನೆಲೆಯಲ್ಲಿ ನಿರಂತರ ದಾಸೋಹ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ ಎನ್ನುವ ಮಾಹಿತಿ ಇರುತ್ತದೆ. ನಗರಸಭೆಯ ಅಧಿಕಾರಿಗಳು ಸ್ವಚ್ಛತೆಗೆ, ಕುಡಿಯುವ ನೀರಿನ ಸೌಕರ್ಯಕ್ಕೆ ಮತ್ತು ವಾಹನ ಸೌಲಭ್ಯಕ್ಕೆ ವಿಶೇಷ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ಪೌರಾಯುಕ್ತ ಗಣಪತಿ ಪಾಟೀಲಗೆ ಸೂಚಿಸಿದರು.



ಶ್ರೀಮಠಕ್ಕೆ ಸಂಪರ್ಕ ಇರುವ ಎಲ್ಲಾ ರಸ್ತೆಗಳ ರಿಪೇರಿ ಮತ್ತು ಪ್ರತಿ ದಿನ ಕಸ ತೆಗೆಯುವ ವ್ಯವಸ್ಥೆ ಮಾಡಬೇಕು. ಜನವರಿ 21ರಿಂದ ಫೆಬ್ರವರಿ 10ರವರೆಗೆ ಶ್ರೀಮಠದ ಸುತ್ತಲು, ಮಹಾದಾಸೋಹ ಸಂಪರ್ಕ ರಸ್ತೆಗಳು, ಜಾತ್ರಾ ಅಂಗಡಿ, ತೇರು ಸಾಗುವ ಆವರಣ, ವಾಹನ ಪಾರ್ಕಿಂಗ್ ಸ್ಥಳಗಳಲ್ಲಿ ಕಸ ವಿಲೇವಾರಿ ಮಾಡಿ ಧೂಳು ಬಾರದಂತೆ ನೀರಿನ ವ್ಯವಸ್ಥೆ ಮಾಡಬೇಕು. ಈ ಕಾರ್ಯಕ್ಕಾಗಿ ಅಗತ್ಯ ಸಂಖ್ಯೆಯಲ್ಲಿ ಕಾರ್ಮಿಕರನ್ನು ನಿಯೋಜಿಸಬೇಕು. ಯಾತ್ರಾರ್ಥಿಗಳಿಗೆ ನೀಡುವ ಕಾಲೇಜ್, ಶಾಲೆ, ಯಾತ್ರಿ ನಿವಾಸ, ವೃದ್ಧಾಶ್ರಮ ಹಾಗೂ ಶ್ರೀಮಠದ ಆವರಣದ ವಸತಿ ಸ್ಥಳಗಳಲ್ಲಿ ಶುಚಿತ್ವ ಇರಬೇಕು. ಸೊಳ್ಳೆಗಳು ಬರದಂತೆ ಫಾಗಿಂಗ್ ಮಾಡಿಸಬೇಕು. ಡಿಟಿಟಿ ಪುಡಿ ಹಾಕಬೇಕು. ಸಾರ್ವಜನಿಕ ಶೌಚಾಲಯಗಳಲ್ಲಿ ಸಹ ಶುಚಿತ್ವ ಕಾಯ್ದುಕೊಳ್ಳಬೇಕು. ಯಾವುದೇ ರೀತಿಯ ಸಾಂಕ್ರಾಮಿಕ ರೋಗಗಳು ಹರಡದಂತೆ ಎಲ್ಲಾ ರೀತಿಯ ಕ್ರಮಗಳನ್ನು ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಸೂಚಿಸಿದರು.

ಮಹಾ ದಾಸೋಹಕ್ಕೆ ಕುಡಿಯುವ ನಿರಂತರ ನೀರು, ಮಠದ ನೂತನ ಕಾಂಪ್ಲೆಕ್ಸ್, ಗವಿಸಿದ್ದೇಶ್ವರ ಕಾಲೇಜ್ ಆವರಣ, ಶ್ರೀಮಠದ ಯಾತ್ರಿ ನಿವಾಸ ಸೇರಿದಂತೆ ವಿವಿಧೆಡೆ ನೀರು ಪೂರೈಸಬೇಕು. ಶ್ರೀಮಠಕ್ಕೆ ಸರಬರಾಜು ಆಗುವ ಎಲ್ಲಾ ನೀರುಗಳಿಗೆ ಹಾಗೂ ಶ್ರೀಮಠದ ಕೆರೆ ಬಾವಿಗಳಿಗೆ ಬ್ಲಿಚಿಂಗ್ ಪೌಡರ್ ಹಾಕಿಸಬೇಕು. ತಾತ್ಕಾಲಿಕ ಸ್ನಾನ ಗೃಹ ಮತ್ತು ಶೌಚಾಲಯಗಳಿಗೆ ನೀರು ಪೂರೈಕೆ ಮಾಡಬೇಕು. ಯಾತ್ರಿಕರಿಗೆ ವಸತಿ ಒದಗಿಸಿದ ಸ್ಥಳಗಳಿಗೆ ಸಹ ನೀರು ಪೂರೈಕೆಗೆ ಅಗತ್ಯ ವ್ಯವಸ್ಥೆ ಮಾಡಬೇಕು ಎಂದು ಜಿಲ್ಲಾಧಿಕಾರಿಗಳು ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಆರೋಗ್ಯ ಅಧಿಕಾರಿಗಳು ಹಾಗೂ ಆಹಾರ ಸುರಕ್ಷಾ ಅಧಿಕಾರಿಗಳು ಗವಿಮಠದ ಅಡುಗೆ ಸಿಬ್ಬಂದಿಯೊಂದಿಗೆ ವಿಶೇಷ ಸಭೆ ನಡೆಸಿ ಆಹಾರ ಸುರಕ್ಷಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಜಾತ್ರೆ ನಡೆಯುವ ಸ್ಥಳದಲ್ಲಿ ತುರ್ತು ಆರೋಗ್ಯ ಘಟಕ ಸ್ಥಾಪಿಸಲು ಕರ್ತವ್ಯಕ್ಕೆ ತಜ್ಞವೈದ್ಯರನ್ನು ಮತ್ತು ಶುಶ್ರೂಕಿಯರನ್ನು ನಿಯೋಜಿಸಬೇಕು. ಕೋವಿಡ್ ಹಿನ್ನೆಲೆಯಲ್ಲಿ ಈಗಿನಿಂದಲೇ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ ಅವರು ಮಾತನಾಡಿ, ಬಹುದೊಡ್ಡ ಪ್ರಮಾಣದಲ್ಲಿ ಜಾತ್ರೋತ್ಸವ ನಡೆಯುವುದರಿಂದ ಅಗತ್ಯ ಸಂಖ್ಯೆಯಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಿ ಪೊಲೀಸ್ ಭದ್ರತಾ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಜಿಲ್ಲಾ ಪೊಲೀಸ್ ಉಪಧೀಕ್ಷಕರಾದ ಸಿದ್ಧಲಿಂಗಪ್ಪಗೌಡ ಪಾಟೀಲ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಕಾವ್ಯರಾಣಿ ಕೆ.ವಿ., ಜಿಲ್ಲಾ ಪಂಚಾಯತ್‌ನ ಮುಖ್ಯ ಯೋಜನಾಧಿಕಾರಿ ಮಂಜುನಾಥ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

# ರಾಜ್ಯ ಮಟ್ಟದ ಯುವಜನೋತ್ಸವಕ್ಕೆ ಸಿದ್ಧತೆ

**ಹಂಪಿ ಟೈಮ್ಸ್ ಬಳ್ಳಾರಿ:** ಜ.06 ಮತ್ತು 07 ರಂದು ಬಳ್ಳಾರಿ ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನಿಸಿಪಲ್ ಕಾಲೇಜು ಮೈದಾನದ ಆವರಣದಲ್ಲಿ ಆಯೋಜಿಸಲಾಗುತ್ತಿರುವ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ಅಂಗವಾಗಿ ಬುಧವಾರದಿಂದ ವೇದಿಕೆ ನಿರ್ಮಾಣ ಸಿದ್ಧತೆ ನಡೆದಿದೆ.

ಜಿಲ್ಲೆಯಲ್ಲಿ ಮೊದಲ ಬಾರಿಗೆ ಆಯೋಜಿಸಲಾಗುತ್ತಿರುವ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿ ನಡೆಸಲು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಗತ್ಯ ಸಿದ್ಧತೆ



ಮಾಡಿಕೊಂಡಿದೆ. ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮ ಯಶಸ್ವಿಗೊಳಿಸಲು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಯುವ ಸಬಲೀಕರಣ, ಕ್ರೀಡೆ ಸಚಿವರಾದ ಬಿ.ನಾಗೇಂದ್ರ ಕೋರಿದ್ದಾರೆ.

# ಮೊಬೈಲ್‌ನಲ್ಲಿಯೇ ಆರೋಗ್ಯ ಕಾರ್ಡ್

### ಜಿಲ್ಲಾ ಆರೋಗ್ಯ ಇಲಾಕಾಧಿಕಾರಿ ಡಾ.ರಮೇಶ್ ಬಾಬು ಹೇಳಿಕೆ

**ಹಂಪಿ ಟೈಮ್ಸ್ ಬಳ್ಳಾರಿ**
ಎಬಿ-ಪಿಎಮ್‌ಜೆಎವೈ-ಸಿಎಮ್ ಆರ್‌ಕೆ (ಆಯುಷ್ಮಾನ್ ಭಾರತ್ ಪ್ರಧಾನಮಂತ್ರಿ ಜನಾರೋಗ್ಯ ಯೋಜನಾ ಮುಖ್ಯಮಂತ್ರಿ ಆರೋಗ್ಯ ಕರ್ನಾಟಕ) ಎಂಬ ಹೆಸರಿನೊಂದಿಗೆ ದೊರಕುವ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಆಯುಷ್ಮಾನ್ ಕಾರ್ಡ್‌ಗಳನ್ನು ಸಾರ್ವಜನಿಕರು ತಮ್ಮ ಆಂಡ್ರಾಯ್ಡ್ ಮೊಬೈಲ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ಮೂಲಕ ಕಾರ್ಡ್‌ಗಳನ್ನು ಪಡೆದುಕೊಳ್ಳಬಹುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ರಮೇಶ್ ಬಾಬು ತಿಳಿಸಿದ್ದಾರೆ.

ಈ ಕಾರ್ಡ್‌ಗಳಿಂದ 1650 ವಿವಿಧ ಶಸ್ತ್ರಚಿಕಿತ್ಸಾ ವಿಧಾನಗಳಿಗೆ ಸಂಬಂಧಿಸಿದಂತೆ ಬಿಪಿಎಲ್ ಕುಟುಂಬಗಳಿಗೆ ವಾರ್ಷಿಕ 5 ಲಕ್ಷದವರೆಗೆ ಹಾಗೂ ಎಪಿಎಲ್ ಕುಟುಂಬಗಳಿಗೆ ವಾರ್ಷಿಕ 1.5 ಲಕ್ಷದವರೆಗೆ ಸುಸಜ್ಜಿತ ಸರ್ಕಾರಿ ಅಥವಾ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸಾ ವೆಚ್ಚ ಸೌಲಭ್ಯ ಪಡೆದುಕೊಳ್ಳಬಹುದು. ಕಾರ್ಡ್‌ಗಳನ್ನು ಪಡೆಯಲು ಬಿಪಿಎಲ್ ಮತ್ತು ಎಪಿಎಲ್ ಕಾರ್ಡ್ ಮತ್ತು ಆಧಾರ್‌ಕಾರ್ಡ್‌ನೊಂದಿಗೆ ತಮ್ಮ ಮೊಬೈಲ್‌ನಲ್ಲಿಯೇ (ಆಂಡ್ರಾಯ್ಡ್ ಮೊಬೈಲ್) ನೋಂದಣಿ ಮೂಲಕ ಕಾರ್ಡ್‌ಗಳನ್ನು ಪಡೆಯಬಹುದು ಎಂದು ಹೇಳಿದ್ದಾರೆ.

ನೋಂದಣಿ ಮಾಡಿಕೊಳ್ಳುವ ವಿಧಾನ:*

ತಮ್ಮ ಮೊಬೈಲ್‌ನ ಗೂಗಲ್ ವೆಬ್‌ಸೈಟ್‌ನಲ್ಲಿ http://beneficiary.nha.gov.in ಎಂದು ಟೈಪ್ ಮಾಡಿದ ನಂತರ ಪಿ.ಎಮ್.ಜೆ.ವೈ ಬೆನಿಫಿಸಿರಿ ಪೋರ್ಟಲ್ ಕಂಡು ಬರುತ್ತದೆ. ಪೋರ್ಟಲ್ ಅನ್ನು ತೆರೆದಾಗ ಲಾಗಿನ್ ಆಸ್ ಎಂದು ಮಾಹಿತಿ ಕೇಳುವ ಹಂತದಲ್ಲಿ ಬೆನ್‌ಫಿಸಿರಿ ಎಂಬುದನ್ನು ಆಯ್ಕೆ ಮಾಡಿಕೊಳ್ಳಬೇಕು. ನಂತರದಲ್ಲಿ ತಮ್ಮ ಮೊಬೈಲ್ ಸಂಖ್ಯೆಯನ್ನು ನಮೂದಿಸಿ ಒಟಿಪಿ ಮುಖಾಂತರ ಲಾಗಿನ್ ಮಾಡಿಕೊಳ್ಳಬೇಕು. ಒಟಿಪಿ ನೊಂದಾಯಿಸಿ ಸಬ್‌ಮಿಟ್ ಮಾಡಿದ ನಂತರ ಪಿ.ಎಮ್.ಜೆ.ವೈ ಪೋರ್ಟಲ್ ಓಪನ್ ಆಗುತ್ತದೆ. ಇಲ್ಲಿ ಸಾರ್ವಜನಿಕರು ತಮ್ಮ ರಾಜ್ಯ ಎಂಬಲ್ಲಿ ಕರ್ನಾಟಕ, ಜಿಲ್ಲೆ ಎನ್ನುವಲ್ಲಿ ಬಳ್ಳಾರಿ ಎಂದು ಅಥವಾ ತಮ್ಮ ಮೂಲ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಕ್ಲೈಮ್‌ಟೈಪ್ ಎನ್ನುವಲ್ಲಿ ಕುಟುಂಬ ಎಂದು ಆಯ್ಕೆ ಮಾಡಿಕೊಂಡು ಆಧಾರ್ ಸಂಖ್ಯೆ ನಮೂದಿಸಿ ಸರ್ಚ್ ಮಾಡಬೇಕು.

ಈಗಾಗಲೇ ಎಬಿ.ಪಿ.ಎಮ್.ಜೆ.ವೈ-ಸಿಎಮ್ ಆರೋಗ್ಯ ಕರ್ನಾಟಕ ಕಾರ್ಡ್ ಅನ್ನು ಬೇರೆ ಯಾವುದಾದರೂ ಯೋಜನೆಗೆ ನೋಂದಣಿ (ಇ-ಕೆವೈಸಿ) ಲಿಂಕ್ ಮಾಡಿಕೊಂಡಿದ್ದರೆ ನೇರವಾಗಿ ಪೋರ್ಟಲ್‌ನಲ್ಲಿ ಕಾರ್ಡ್ ಜನರೇಷನ್ ವೆರಿಪೈ ಎಂದು ಕಂಡು ಬರುತ್ತದೆ. ಒಂದು ವೇಳೆ ಬೇರೆ ಯಾವುದಾದರು ಯೋಜನೆಗೆ ಕಾರ್ಡ್ ಅನ್ನು ನೋಂದಣಿ ಮಾಡದೇ ಇದ್ದರೆ (ನಿಮ್ಮ ಇ-ಕೆವೈಸಿ ಹೊಂದಿಲ್ಲದಿದ್ದರೆ) ಆಧಾರ್ ಒಟಿಪಿ ಮುಖಾಂತರ ಇ-ಕೆವೈಸಿಮಾಡಿಕೊಂಡು ಕಾರ್ಡ್‌ನ್ನುಪಡೆಯಬಹುದಾಗಿದೆ. ಅತೀ ಮುಖ್ಯವಾಗಿ ಆಯುಷ್ಮಾನ್ ಭವಃ ಕಾರ್ಡ್ ಪಡೆಯಲು ಪ್ರತಿ ಕುಟುಂಬದ ಎಪಿಎಲ್ ಅಥವಾ ಬಿಪಿಎಲ್ ರೇಷನ್ ಕಾರ್ಡ್ ತಪ್ಪದೇ ಹೊಂದಿರಬೇಕು. ರೇಷನ್ ಕಾರ್ಡ್‌ಗಳಿಗೆ ಆಧಾರ್ ಸಂಖ್ಯೆ ಜೋಡಣೆಯಾಗಿರಬೇಕು. ಸಾರ್ವಜನಿಕರು ತಮ್ಮ ಸ್ಮಾರ್ಟ್ ಮೊಬೈಲ್‌ಗಳ ಮೂಲಕ ಯಾವುದೇ ವೆಚ್ಚವಿಲ್ಲದೇ ಸರ್ಕಾರದ ಮಹತ್ವಕಾಂಕ್ಷಿ ಯೋಜನೆಯಾದ ಆಯುಷ್ಮಾನ್ ಭವಃ ಆರೋಗ್ಯ ಕರ್ನಾಟಕ ಯೋಜನೆಯ ಕಾರ್ಡ್‌ಗಳನ್ನು ಪಡೆದುಕೊಳ್ಳಬಹುದಾಗಿದೆ. ತಾಂತ್ರಿಕವಾಗಿ ಯಾವುದೇ ತೊಂದರೆ ಕಂಡು ಬಂದರು ಸಹ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು ಎಂದು ಡಾ.ರಮೇಶ್ ಬಾಬು ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA